# ಅನಂತಪಥ

ANANTHKUMAR PRATISHTHANA

ಪುಟ 9
ವ್ಯಕ್ತಿ ವಿಶೇಷ ಮಾಲಿಕೆ
ಶ್ರೀ ದುರ್ವಿನೀತ



ಸಂಪುಟ - 6 ಡಿಸೆಂಬರ್- 2025 ಸಂಚಿಕೆ - 66

## ವಂದೇ ಮಾತರಂ ಕೇವಲ ಗೀತೆಯಲ್ಲ; ರಾಷ್ಟ್ರದ ಆತ್ಮದ ಪ್ರತಿಬಿಂಬ




ಇಂದು ಸಂಸತ್ತಿನಲ್ಲಿ 'ವಂದೇ ಮಾತರಂ' ಕುರಿತ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದಿವೆ. ಒಂದು ಕಾಲದಲ್ಲಿ ಬ್ರಿಟಿಷರ ಎದೆಯಲ್ಲಿ ನಡುಕ ಹುಟ್ಟಿಸಿದ್ದ ಈ ಗೀತೆ, 150 ವರ್ಷಗಳ ಐತಿಹಾಸಿಕ ಪಯಣವನ್ನು ಪೂರೈಸಿದ್ದರೂ ಇಂದಿಗೂ ಭಾರತದ ರಾಷ್ಟ್ರೀಯ ಅಸ್ಮಿತೆಯ ಶಕ್ತಿಯುತ ಪ್ರತಿಬಿಂಬವಾಗಿ ಉಳಿದಿದೆ. ಸ್ವಾತಂತ್ರ್ಯ ಹೋರಾಟಗಾರರು ಗಲ್ಲಿಗೇರುವಾಗಲೂ ಸ್ಫೂರ್ತಿಯಿಂದ ಹಾಡುತ್ತಿದ್ದ ಈ ಗೀತೆಯ ಅಖಂಡತೆಯನ್ನು ಗೌರವಿಸುವುದು ಮತ್ತು ಅದರ ಮಹತ್ವವನ್ನು ಮುಂದಿನ ಪೀಳಿಗೆಗೆ ಬೆಳೆಸುವುದು ಇಂದಿನ ಅಗತ್ಯವಾಗಿದೆ."

**ಭಾರತ: ಸಾಕ್ಷಾತ್ ಜಗನ್ಮಾತೆಯ ದಿವ್ಯ ರೂಪ**

ಬಂಕಿಮ ಚಂದ್ರ ಚಟರ್ಜಿ ಅವರು 'ವಂದೇ ಮಾತರಂ' ಎಂಬ ಅಮರ ಮಂತ್ರವನ್ನು ಈ ಜಗತ್ತಿಗೆ ನೀಡಿದಾಗ, ಅವರ ಕಣ್ಣಮುಂದೆ ಇದ್ದದ್ದು ಕೇವಲ ನದಿ, ಪರ್ವತ ಮತ್ತು ಕಾಡುಗಳಿಂದ ಕೂಡಿದ ಭೌಗೋಳಿಕ ಭೂಪಟವಲ್ಲ; ಬದಲಾಗಿ ಅದು ಸಾಕ್ಷಾತ್ ಜಗನ್ಮಾತೆಯ ದಿವ್ಯ ಸ್ವರೂಪವಾಗಿತ್ತು.

ಈ ಕಲ್ಪನೆಯ ಹಿಂದೆ ಅತ್ಯಂತ ಆಳವಾದ ಪೌರಾಣಿಕ ಮತ್ತು ಆಧ್ಯಾತ್ಮಿಕ ಹಿನ್ನೆಲೆಯಿದೆ. ಪುರಾಣಗಳ ಪ್ರಕಾರ, ದಾಕ್ಷಾಯಿಣಿಯು ಯೋಗಾಗ್ನಿಯಲ್ಲಿ ಪ್ರಾಣತ್ಯಾಗ ಮಾಡಿದಾಗ, ಶಿವನು ತೀವ್ರ ಶೋಕ ಮತ್ತು ಕೋಪದಿಂದ ರುದ್ರನರ್ತನವನ್ನು (ತಾಂಡವ) ಆರಂಭಿಸಿದನು. ಸೃಷ್ಟಿಯನ್ನೇ ನಾಶಮಾಡಬಲ್ಲ ಶಿವನ ಈ ರೌದ್ರಾವತಾರವನ್ನು ಕಂಡು ಬೆದರಿದ ದೇವತೆಗಳು, ಅವನನ್ನು ಶಾಂತಗೊಳಿಸುವಂತೆ ವಿಷ್ಣುವಿನಲ್ಲಿ ಮೊರೆಯಿಟ್ಟರು. ಆಗ ಶಿವನು ದೇವಿಯ ಪಾರ್ಥಿವ ಶರೀರವನ್ನು ಹೊತ್ತು ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದಾಗ, ವಿಷ್ಣುವು ತನ್ನ ಸುದರ್ಶನ ಚಕ್ರವನ್ನು ಪ್ರಯೋಗಿಸಿದನು. ಆ ಚಕ್ರದಿಂದ ಛೇದಿಸಲ್ಪಟ್ಟ ದೇವಿಯ ದೇಹದ ಅಂಗಾಂಗಗಳು 'ಅಖಂಡ ಭಾರತ'ದ ವಿವಿಧೆಡೆ ಬಿದ್ದವು. ಈ ಪವಿತ್ರ ಸ್ಥಳಗಳೇ ಮುಂದೆ ಶಕ್ತಿಪೀಠಗಳಾದವು. ಉದಾಹರಣೆಗೆ, ದೇವಿಯ ನೂಪುರ (ಗೆಜ್ಜೆ) ದೆಹಲಿಯ ಸಮೀಪದ ಅಂಬರ ದೇವಿ ಕ್ಷೇತ್ರದಲ್ಲಿ ಬಿದ್ದರೆ, ದೇವಿಯ ನಾಸಿಕ (ಮೂಗು) ಬಿದ್ದ ಸ್ಥಳವು ಮಹಾರಾಷ್ಟ್ರದ ಇಂದಿನ 'ನಾಸಿಕ್' ಪಟ್ಟಣವಾಯಿತು.

ಪುಟ 4 ರಲ್ಲಿ ಮುಂದುವರಿದಿದೆ

## ರಾಷ್ಟ್ರ ನಿರ್ಮಾಣಕ್ಕೆ ಯುವಶಕ್ತಿ: 'ಯುವ ರಾಯಭಾರಿ' ತರಬೇತಿ ಶಿಬಿರ ಯಶಸ್ವಿ

ಅನಂತಕುಮಾರ್ ಪ್ರತಿಷ್ಠಾನದ ಮಹತ್ವಾಕಾಂಕ್ಷಿ ಯೋಜನೆಯಾದ 'ಯುವ ರಾಯಭಾರಿ' (Youth Ambassadors Initiative) ಕಾರ್ಯಕ್ರಮದ ಶಿಬಿರವು ಇತ್ತೀಚೆಗೆ ಬೆಂಗಳೂರಿನ ಸೌತ್ ಎಂಡ್ ಸರ್ಕಲ್‌ನಲ್ಲಿರುವ ಅನಂತ ಪ್ರೇರಣಾ ಕೇಂದ್ರದ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು. ನವೆಂಬರ್ 22 ಮತ್ತು ಡಿಸೆಂಬರ್ 6 ರಂದು ಎರಡು ಹಂತಗಳಲ್ಲಿ ನಡೆದ ಈ ವಿಶೇಷ ತರಬೇತಿ ಶಿಬಿರದಲ್ಲಿ ನಗರದ ವಿವಿಧ ಶಾಲೆಗಳ 60 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಉತ್ಸಾಹದಿಂದ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ, ವಿಜ್ಞಾನಿಗಳು ನಡೆಸಿದ ಅಧ್ಯಯನದ ಪ್ರಕಾರ, ಬೆಂಗಳೂರಿನಲ್ಲಿ 7 ಮನುಷ್ಯರಿಗೆ 1 ಮರ ಲಭ್ಯವಿದೆ. ವಾಸ್ತವವಾಗಿ ಒಬ್ಬ ಮನುಷ್ಯನಿಗೆ 7 ಮರದ ಅಗತ್ಯ ಇದೆ. ಪ್ರತಿಯೊಬ್ಬ ಮನುಷ್ಯನಿಗೆ ವರ್ಷಕ್ಕೆ ಸುಮಾರು 700 ಕೆ.ಜಿ. ಆಮ್ಲಜನಕದ ಅಗತ್ಯವಿದೆ. ಒಂದು ಆರೋಗ್ಯಕರ ಮರವು ವಾರ್ಷಿಕವಾಗಿ ಸುಮಾರು 100 ಕೆ.ಜಿ. ಆಮ್ಲಜನಕವನ್ನು ಉತ್ಪಾದಿಸುತ್ತದೆ. ಹೀಗಾಗಿ ಪ್ರತಿಯೊಬ್ಬ ಮನುಷ್ಯನಿಗೆ ಆತನ ವಾರ್ಷಿಕ ಆಮ್ಲಜನಕದ ಅಗತ್ಯಗಳನ್ನು ಪೂರೈಸಲು ಸುಮಾರು 7 ಮರಗಳು ಅಗತ್ಯವಿದೆ. ಈ ನಿಟ್ಟಿನಲ್ಲಿ ಅದಮ್ಯ ಚೇತನ ಸಂಸ್ಥೆಯು "ಹಸಿರು ಭಾನುವಾರ ಕಾರ್ಯಕ್ರಮ ಆಯೋಜಿಸಿ, ಪ್ರತಿ ಭಾನುವಾರವೂ ಬೆಂಗಳೂರಿನಲ್ಲಿ ಗಿಡಗಳನ್ನು ನೆಡುವ ಯೋಜನೆ ಹಮ್ಮಿಕೊಂಡಿದೆ ಎಂದರು.




ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದ ಕೆಮಿಕಲ್ ಇಂಜಿನಿಯರಿಂಗ್ ಪದವೀಧರೆ ಶ್ರೀಮತಿ ಮೋಹಿನಿ ಆಚಾರ್ ಅವರು ಪ್ಲಾಸ್ಟಿಕ್ ಬಳಕೆಯಿಂದಾಗುವ ಗಂಭೀರ ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮಾಹಿತಿ ನೀಡಿದರು.

ಪುಟ 4 ರಲ್ಲಿ ಮುಂದುವರಿದಿದೆ

ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ರಾಷ್ಟ್ರೀಯ ರಸ್ತೆ ಸುರಕ್ಷಾ ತಿಂಗಳು




ನಿಮಗೆ ಗೊತ್ತೆ, ರಸ್ತೆ ಅಪಘಾತದಲ್ಲಿ ಅತಿ ಹೆಚ್ಚು ಜನರು ಪ್ರಾಣ ಬಿಡುವ ದೇಶ ಎಂದರೆ ಭಾರತ. ಪ್ರತಿ ವರ್ಷ ನಮ್ಮ ದೇಶದಲ್ಲಿ ಒಂದು ಲಕ್ಷ, 80 ಸಾವಿರ ಜನರು ರಸ್ತೆ ಅಪಘಾತದಲ್ಲಿ ಪ್ರಾಣ ಬಿಡುತ್ತಾರೆ. ಅಂದರೆ, ದಿನಕ್ಕೆಷ್ಟು ಎಂಬುದನ್ನು ನೀವೇ ಲೆಕ್ಕ ಮಾಡಿ. ಇನ್ನು ಅಪಘಾತಕ್ಕೆ ಸಿಕ್ಕು, ಹೇಗೋ ಬಚಾವಾಗಿ ಆಸತ್ರೆ ಸೇರಿ ಹೊರಬಂದು, ಜೀವನವಿಡೀ ಅಂಗವಿಕಲರಾಗಿ ಬದುಕುವವರ ಸಂಖ್ಯೆ ಇನ್ನೂ ದೊಡ್ಡದು.



ಅದಕ್ಕೇ ಜನವರಿ ತಿಂಗಳನ್ನು ‘ರಾಷ್ಟ್ರೀಯ ರಸ್ತೆ ಸುರಕ್ಷಾ ತಿಂಗಳು’ ಎಂದು ನಾವು ಆಚರಿಸುತ್ತೇವೆ. ಹಿಂದೆಲ್ಲ ಜನವರಿ 11ರಿಂದ 17ರವರೆಗೆ ಒಂದು ವಾರ ಮಾತ್ರ 'ರಸ್ತೆ ಸುರಕ್ಷಾ ಸಪ್ತಾಹ'ವನ್ನು ಆಚರಿಸುತ್ತಿದ್ದೆವು. ಅದು ಸಾಲದೆಂದು 2021ರಿಂದ ಇಡೀ ತಿಂಗಳು ರಸ್ತೆ ಸುರಕ್ಷೆಯ ಬಗ್ಗೆ ಜಾಗೃತಿ ಮೂಡಿಸುವ ಯತ್ನಗಳು ನಡೆಯುತ್ತಿವೆ. ಗಾಡಿ ಓಡಿಸುವವರಿಗೂ ಕಾಲ್ನಡಿಗೆಯಲ್ಲಿ ರಸ್ತೆಯ ಪಕ್ಕದಲ್ಲಿ ಸಾಗುವವರಿಗೂ ಎಚ್ಚರಿಕೆಯ ಪಾಠಗಳನ್ನು ತಿಳಿಸಬೇಕಾದ ವಾರ ಇದು.

ರಸ್ತೆಯಲ್ಲಿ ವಾಹನ ಓಡಿಸುವವರಿಗೆ ರಸ್ತೆಯ ಸುರಕ್ಷಾ ನಿಯಮಗಳೆಲ್ಲ ಗೊತ್ತಿರಬೇಕು. ವಾಹನ ಓಡಿಸುವಾಗ ಮೈಯೆಲ್ಲ ಕಣ್ಣಾಗಿರಬೇಕು. ಏಕೆಂದರೆ ರಸ್ತೆಗೆ ನುಗ್ಗುವ ನಾಯಿಗಳಿಗೆ, ಹಸುಗಳಿಗೆ ಈ ನಿಯಮಗಳು ಗೊತ್ತಿರುವುದಿಲ್ಲ. ಎಷ್ಟೊ ಬಾರಿ ಹಾಗೆ ನುಗ್ಗುವ ಪ್ರಾಣಿಗಳ ಪ್ರಾಣ ಉಳಿಸಲೆಂದು ಡ್ರೈವರ್ ಹಠಾತ್ ಬ್ರೇಕ್ ಹಾಕಿದರೆ ಅಥವಾ ದಿಢೀರ್ ಪಕ್ಕಕ್ಕೆ ಸರಿದರೆ ಹಿಂದಿನಿಂದ ಬರುವ ವಾಹನಗಳು ಗುದ್ದುತ್ತವೆ. ರಸ್ತೆಯನ್ನು ದಾಟುವವರು ಮತ್ತು ರಸ್ತೆಯ ಪಕ್ಕದಲ್ಲಿ ಸೈಕಲ್ ಓಡಿಸುವವರು ಹಾಗೂ ಕಾಲ್ನಡಿಗೆಯಲ್ಲಿ ಹೋಗುವವರೂ ತುಂಬ ಎಚ್ಚರವಹಿಸಬೇಕು.

ಈಚೆಗೆ ಬೆಂಗಳೂರಿನಲ್ಲಿ ಯುವಕನೊಬ್ಬ ಬೈಕ್‌ನಲ್ಲಿ ಆಸ್ಪತ್ರೆಗೆ ಹೋಗುತ್ತಿದ್ದಾಗಲೇ ಹೃದಯಾಘಾತ ಸಂಭವಿಸಿ ರಸ್ತೆಯಲ್ಲಿ ಬಿದ್ದ. ‘ದಯವಿಟ್ಟು ಸಹಾಯ ಮಾಡಿ’ ಎಂದು ಆತನ ಪತ್ನಿ ಅದೆಷ್ಟು ವಾಹನ ಚಾಲಕರಿಗೆ ವಿನಂತಿಸಿದರೂ ಯಾರೂ ನೆರವಿಗೆ ಬರಲಿಲ್ಲ. ಪಾಪ ರಸ್ತೆ ಮಧ್ಯೆಯೇ ಆತನ ಜೀವ ಹೋಯಿತು. ರಸ್ತೆಯನ್ನು ಬಳಸುವವರು ಕೇವಲ ನಾವು ಸುರಕ್ಷಿತವಾಗಿ ಸಂಚರಿಸಿದರೆ ಸಾಲದು. ಇತರರು ಕಷ್ಟದಲ್ಲಿದ್ದಾಗ ಸಹಾಯಕ್ಕೂ ಮುಂದಾಗಬೇಕು.

ಅನಂತಯಾನ
ನಿರೂಪಣೆ : ಟಿ.ಎಸ್. ಗೋಪಾಲ್

# ಧಮನಿಯಲ್ಲಿ ನಾಯಕತ್ವ ಗುಣಗಳು

1978-79. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಆಗತಾನೇ ಕಾಲೇಜು ಮೆಟ್ಟಿಲು ಹತ್ತಿದ್ದರು. ಧಾರವಾಡದ ಪ್ರತಿಷ್ಠಿತ ಕರ್ನಾಟಕ ಕಾಲೇಜಿನಲ್ಲಿ ಪಿ.ಯು.ಸಿ. ಓದಲು ಸೇರಿಕೊಂಡಿದ್ದರು. ತಮ್ಮ ಮನೆಯಲ್ಲಿ ಅವರ ತಂದೆಯವರೂ ಸೇರಿದಂತೆ ಎಲ್ಲರೂ ಸ್ವಯಂಸೇವಕರಾಗಿದ್ದವರು.

ತುರ್ತುಪರಿಸ್ಥಿತಿಯ ಕಾಲದಲ್ಲಿ ಸರ್ಕಾರದ ನಿಷೇಧಕ್ಕೆ ಒಳಪಟ್ಟು ಸ್ವಯಂಸೇವಕರ ಚಟುವಟಿಕೆಗಳೂ, ಶಾಖೆಯ ಕಾರ್ಯಕ್ರಮಗಳೂ ಸ್ಥಗಿತಗೊಂಡಿದ್ದವು. ವಿಶ್ವೇಶ್ವರ ಹೆಗಡೆ ಧಾರವಾಡಕ್ಕೆ ಬಂದಕೂಡಲೇ ಶಾಖೆಯ ಚಟುವಟಿಕೆ ನಡೆಯುತ್ತಿರುವುದನ್ನು ಗಮನಿಸಿ ಅಲ್ಲಿಗೆ ಹೋಗಿ ಸೇರಿಕೊಂಡರು. ಹಿರಿಯ ಸ್ವಯಂಸೇವಕರಾಗಿದ್ದ ಶ್ರೀ ಕೃಷ್ಣ ಗೋಖಲೆಯವರ ಮಗ ಶ್ರೀ ರಾಜೇಂದ್ರ ಗೋಖಲೆಯವರ ಪರಿಚಯವಾಗಿ ಅವರ ಮೂಲಕ ವಿದ್ಯಾರ್ಥಿ ಪರಿಷತ್ತಿಗೂ ಸೇರಲು ಅವಕಾಶವಾಯಿತು.

ಆ ಹೊತ್ತಿಗೆ ಅನಂತಕುಮಾರ್ ಹುಬ್ಬಳ್ಳಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿದ್ಯಾರ್ಥಿ ಪರಿಷತ್ತಿನ ಕಾರ್ಯಕ್ರಮಗಳಿಗಾಗಿ ಧಾರವಾಡಕ್ಕೂ ಆಗಿಂದಾಗ್ಗೆ ಬರುತ್ತಿದ್ದರು. ಅವರಲ್ಲಿದ್ದ ನಾಯಕತ್ವದ ಗುಣ, ಮಾತುಗಾರಿಕೆಯ ವೈಖರಿ, ಸ್ನೇಹಪರತೆಗಳು ಎಲ್ಲ ವಿದ್ಯಾರ್ಥಿಗಳಿಗೂ ಮೆಚ್ಚುಗೆ ತಂದಿದ್ದವು. ಅವರನ್ನು ವಿಶ್ವೇಶ್ವರ ಹೆಗಡೆ ಮತ್ತವರ ಸ್ನೇಹಿತರು ತಮ್ಮ ಕಾಲೇಜಿಗೆ ಕರೆಸಬೇಕೆಂದು ಯೋಚಿಸಿಕೊಂಡಿದ್ದರು. ಅಂತಹುದೊಂದು ಸಂದರ್ಭವೂ ಶೀಘ್ರದಲ್ಲೇ ಒದಗಿ ಬಂದಿತು.

ತಮ್ಮ ಕಾಲೇಜಿಗೆ ಸಂಬಂಧಿಸಿದ ಹಲವು ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಕಾಲೇಜಿನ ಆಡಳಿತಮಂಡಳಿಯ ಹಾಗೂ ಸರ್ಕಾರದ ಗಮನ ಸೆಳೆಯುವ ಸಲುವಾಗಿ ಒಂದು ಚಳುವಳಿಯನ್ನು ಹಮ್ಮಿಕೊಳ್ಳಲು ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ನಿರ್ಧರಿಸಿದ್ದರು. ಚಳುವಳಿ ಪ್ರಾರಂಭವಾಗುವಾಗ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಅನಂತಕುಮಾರರನ್ನು ಕರೆಯಿಸುವುದೆಂದು ತೀರ್ಮಾನಿಸಿದ್ದರು. ನಿಗದಿತ ದಿನ ಕಾಲೇಜು ಆವರಣಕ್ಕೆ ಅನಂತಕುಮಾರ್ ಆಗಮಿಸಿದ್ದೂ ಆಯಿತು. ಅಷ್ಟರಲ್ಲಿ ಸಾವಿರಾರು ವಿದ್ಯಾರ್ಥಿಗಳು ಗುಂಪುಗೂಡಿದ್ದರು. ಸಭೆಯ ವ್ಯವಸ್ಥೆಯನ್ನು ಕುರಿತು ಯಾವ ಯೋಚನೆಯನ್ನೂ ಮಾಡಿರದಿದ್ದ ವಿಶ್ವೇಶ್ವರ ಹೆಗಡೆ ಮತ್ತವರ ಸ್ನೇಹಿತರಿಗೆ ಏನು ಮಾಡುವುದೆಂದೇ ತೋಚಲಿಲ್ಲ. ಭಾಷಣಕಾರರಾದ ಅನಂತಕುಮಾರ್ ಎಲ್ಲರಿಗೂ ಕಾಣುವ ಹಾಗೆ ನಿಲ್ಲುವುದಕ್ಕೆ ಒಂದು ವೇದಿಕೆ ಹೋಗಲಿ, ಒಂದು ಕುರ್ಚಿಯೂ ಇರಲಿಲ್ಲ. ಇನ್ನು ಧ್ವನಿವರ್ಧಕದ ವ್ಯವಸ್ಥೆ ಬೇಕಾದೀತೆಂಬ ಕಲ್ಪನೆಯೋ ಆಯೋಜಕರ ತಲೆಗೆ ಹೊಳೆದೇ ಇರಲಿಲ್ಲ.

ಏನೂ ತೋಚದೆ ಪೆಚ್ಚುಪೆಚ್ಚಾಗಿ ನಿಂತಿದ್ದ ಕಾರ್ಯಕರ್ತರ ಗೊಂದಲ ಅನಂತಕುಮಾರರಿಗೆ ಅರ್ಥವಾಗದೆ ಇರುತ್ತದೆಯೇ? ಆಚೀಚೆ ನೋಡಿದ ಅನಂತಕುಮಾರರಿಗೆ ಮೂಲೆಯಲ್ಲಿ ಸೈಕಲ್ ಸ್ಟಾಂಡೊಂದು ಕಂಡಿತು. ಅದೊಂದು ತಗಡಿನ ಛಾವಣಿ ಹೊದೆಸಿದ್ದ ಷೆಡ್. ಎಲ್ಲರೂ ಬನ್ನಿ ಎಂದು ಹೇಳುತ್ತ ಸರಸರನೆ ಸೈಕಲ್ ಸ್ಟಾಂಡಿನ ಕಡೆಗೆ ನಡೆದೇ ಬಿಟ್ಟರು. ಹುಡುಗರ ಗುಂಪು ಸಡಗರದಿಂದಲೇ ಅವರನ್ನು ಹಿಂಬಾಲಿಸಿತು. ಮೂರು ನಾಲ್ಕು ಹುಡುಗರನ್ನು ಕರೆದು ಆ ಷೆಡ್ಡಿನ ಕಂಬವೊಂದನ್ನು ಹಿಡಿದುಕೊಳ್ಳುವಂತೆ ಸೂಚಿಸಿ ನಿಲ್ಲಿಸಿದರು. ಆ ಹುಡುಗರ ತೋಳನ್ನೋ ಹೆಗಲನ್ನೋ ಆಧರಿಸಿ ಅನಂತಕುಮಾರ್ ಸೈಕಲ್ ಸ್ಟಾಂಡಿನ ಮೇಲಕ್ಕೆ ಹತ್ತಿಯೇ ಬಿಟ್ಟರು. ಆಯಿತಲ್ಲ, ಎಲ್ಲರ ಕಣ್ಣಿಗೆ ಕಾಣುವಂತಹ ವೇದಿಕೆ ಸಿದ್ಧವಾಗಿಯೇ ಬಿಟ್ಟಿತು. ಧ್ವನಿವರ್ಧಕ ಇಲ್ಲದಿದ್ದರೆ ಏನಂತೆ, ಎತ್ತರದಲ್ಲಿ ನಿಂತ ಅನಂತಕುಮಾರರ ದೊಡ್ಡ ಧ್ವನಿಯ ಮಾತುಗಳು ಆ ಬೃಹತ್ ಗುಂಪನ್ನು ತಲುಪಲು ಕಷ್ಟವಾಗಲಿಲ್ಲ.

ಶ್ರೀ ಕಾಗೇರಿಯವರು ವರ್ಣಿಸುವಂತೆ, ನಾಯಕತ್ವದ ಲಕ್ಷಣವೆಂದರೆ ಇದು. ನಾಯಕತ್ವದ ಹಮ್ಮುಬಿಮ್ಮುಗಳನ್ನೇನೂ ತೋರದೆ , ಸಂವಹನಕ್ಕಾಗಿ ನಿರ್ದಿಷ್ಟ ವ್ಯವಸ್ಥೆಯನ್ನೋ ಆಡಂಬರವನ್ನೋ ಅಪೇಕ್ಷಿಸದೆ, ಲಭ್ಯವಿರುವ ಸ್ಥಿತಿಯನ್ನೇ ಅನುಕೂಲಕ್ಕೆ ಮಾರ್ಪಡಿಸಿಕೊಳ್ಳುವ ಇಂಥ ಗುಣವಿಶೇಷವು ಸಾಮಾನ್ಯರಲ್ಲಿ ಕಂಡುಬರುವಂತಹುದಲ್ಲ. ಯಾವುದೇ ಪೂರ್ವಸಿದ್ಧತೆ ಸಜ್ಜಿಕೆಗಳಿಲ್ಲದಿರುವ, ಪ್ರತಿಕೂಲ ಪರಿಸ್ಥಿತಿಯಲ್ಲೂ ಅಗತ್ಯಕ್ಕೆ ತಕ್ಕಷ್ಟು ಸಮರ್ಪಕವೆನಿಸಬಹುದಾದ ವ್ಯವಸ್ಥೆಯನ್ನು ಆಯಾ ಕ್ಷಣದಲ್ಲಿ ಕಲ್ಪಿಸಿಕೊಳ್ಳಬಲ್ಲ ಸಾಮರ್ಥ್ಯ ಅನಂತಕುಮಾರರಲ್ಲಿ ಇದ್ದುದಕ್ಕೆ ಇದೊಂದು ನಿದರ್ಶನ.




ಆಗೆಲ್ಲ ವಿದ್ಯಾರ್ಥಿಸಂಘದ ಚಟುವಟಿಕೆಗಳೆಂದರೆ ಸಡಗರದ ಸಂಗತಿಗಳೇ. ಕಾಲೇಜಿನ ವಿದ್ಯಾರ್ಥಿಸಂಘದ ಚುನಾವಣೆಯೆನ್ನುವುದೇ ಒಂದು ಹಬ್ಬ. ಆನೆಯನ್ನು ತರಿಸಿ ಮೆರವಣಿಗೆ ಮಾಡುವಷ್ಟು ಸಂಭ್ರಮ. ಅದರಲ್ಲೂ ಧಾರವಾಡದ ಕರ್ನಾಟಕ ಕಲೇಜಿನ ದೊಡ್ಡಸ್ತಿಕೆ ಒಂದು ಹೆಜ್ಜೆ ಮುಂದೆಯೇ. ಇನ್ನು ಚಳುವಳಿಯೆಂದರೆ ಹೇಳಬೇಕೇ? ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ, ವಿದ್ಯಾರ್ಥಿನಾಯಕರ ಸಭೆಗಳಲ್ಲಿ ಅನಂತಕುಮಾರರ ಮಾತುಗಳಿಗೆ ವಿಶೇಷ ಮಹತ್ತ್ವವಿರುತ್ತಿತ್ತು. ವಿದ್ಯಾರ್ಥಿ ಪರಿಷತ್ತಿಗೆ ಸಂಬಂಧಪಡದ ವಿದ್ಯಾರ್ಥಿಗಳೂ ಅನಂತಕುಮಾರರ ಮಾತನ್ನು ಶ್ರದ್ಧೆ ವಿಶ್ವಾಸಗಳಿಂದ ಆಲಿಸುತ್ತಿದ್ದರು.

ಯಾವುದೇ ಸಂಘಟನೆ, ಪಕ್ಷಗಳಿಂದ ಹೊರತುಪಡಿಸಿದ ನಾಯಕತ್ವದ ಗುಣವಿಶೇಷವನ್ನು ಅನಂತಕುಮಾರರಲ್ಲಿ ಪರವಿರೋಧವೆನ್ನದೆ ಎಲ್ಲರೂ ಕಾಣುತ್ತಿದ್ದುದೇ ಒಂದು ವಿಶೇಷ. ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾಗಿರಲಿ ಬಿಡಲಿ, ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಎಲ್ಲರನ್ನೂ ತನ್ನ ವಲಯಕ್ಕೆ ಒಳಕೊಳ್ಳುವ ಹಾಗೂ ಅವರಿಗೆ ಪ್ರೇರಣೆ ನೀಡಬಲ್ಲ ಶಕ್ತಿ ಅನಂತಕುಮಾರರಲ್ಲಿತ್ತು. ಅವರ ನಡೆನುಡಿಗಳಲ್ಲಿ ಒಟ್ಟಾರೆ ವಿದ್ಯಾರ್ಥಿಸಮುದಾಯದ ಬಗೆಗೆ ಕಾಳಜಿ, ಅನುಭೂತಿಗಳಿದ್ದುವಲ್ಲದೆ ಸ್ವಾರ್ಥಪರತೆಯ ಲವಲೇಶವೂ ಇರಲಿಲ್ಲ. ಹೀಗಾಗಿ ಯಾವುದೇ ಸಂಘಟನೆಗೆ ಸೇರಿದ, ಯಾವುದೇ ವಿಚಾರಧಾರೆಯನ್ನು ಅನುಸರಿಸುವ ವ್ಯಕ್ತಿಯೂ ಹೀಗೊಬ್ಬ ಮುಖಂಡನನ್ನು ನಾಯಕನೆಂದೇ ಗುರುತಿಸಿ ಗೌರವಿಸುವ ಅಪೂರ್ವಗುಣಲಕ್ಷಣವು ಅನಂತಕುಮಾರರಲ್ಲಿ ಕಂಡುಬಂದಂತೆ ಉಳಿದವರಲ್ಲಿ ಕಾಣುವುದು ಮುಂಬರುವ ಕಾಲಕ್ಕೂ ಅಸಂಭವವೆಂದೇ ಹೇಳಬೇಕು.



ವಾರಕ್ಕೊಮ್ಮೆ ವಿದ್ಯಾರ್ಥಿ ಪರಿಷತ್ತಿನ ಸದಸ್ಯರ ಸಭೆಯಲ್ಲಿ ವಿಶ್ವೇಶ್ವರ ಹೆಗಡೆಯವರೂ ಅವರ ಗೆಳೆಯರೂ ಭಾಗವಹಿಸುತ್ತಿದ್ದರು. ಧಾರವಾಡದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಮೋಡಕ್ ಎಂಬ ಮಹನೀಯರ ಮನೆಯ ಅಟ್ಟದಲ್ಲಿ ಈ ಸಭೆ ನಡೆಯುತ್ತಿತ್ತು. ಇದರ ಅಂಗವಾಗಿ ಆಗಿಂದಾಗ್ಗೆ ಸ್ಟಡಿ ಸರ್ಕಲ್ (ಅಭ್ಯಾಸವರ್ಗ) ಎಂಬ ವಿದ್ಯಾರ್ಥಿಸಂವಾದ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದರು. ಈ ಕಾರ್ಯಕ್ರಮಕ್ಕೆ ಅಗತ್ಯವಾದ ಸೂಚನೆಗಳೆಲ್ಲವನ್ನೂ ಕಿಂಚಿತ್ತೂ ತಪ್ಪದಂತೆ ಅನಂತಕುಮಾರರೇ ಕೊಡುತ್ತಿದ್ದರು.

ಪುಟ 5 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ವಂದೇಮಾತರಂ ....

ಹೀಗೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹರಡಿರುವ ಈ ಎಲ್ಲಾ ಶಕ್ತಿಪೀಠಗಳನ್ನು ಒಂದುಗೂಡಿಸಿ ನೋಡಿದಾಗ, ಭಾರತದ ಭೂಪಟವೇ ದೇವಿಯ ಸ್ವರೂಪವಾಗಿ ಮೈವೆತ್ತಿರುವುದು ಸ್ಪಷ್ಟವಾಗುತ್ತದೆ. ಇಡೀ ಭಾರತದ ಮಣ್ಣು ಪರಮೇಶ್ವರಿಯ ಶಕ್ತಿಯಿಂದ ವ್ಯಾಪಿಸಲ್ಪಟ್ಟಿದೆ ಎಂಬ ಈ ಪವಿತ್ರ ಸತ್ಯವೇ ಬಂಕಿಮ ಚಂದ್ರ ಚಟ್ಟೋಪಾಧ್ಯಾಯರಿಗೆ ಪ್ರೇರಣೆಯಾಯಿತು. ಇದೇ ಕಾರಣಕ್ಕಾಗಿ ಅವರು ಈ ದೇಶವನ್ನು ಕೇವಲ ಮಣ್ಣಿನ ಮುದ್ದೆಯೆಂದು ಭಾವಿಸದೆ, ಜೀವಂತವಾಗಿ ಸ್ಪಂದಿಸುವ ಶಕ್ತಿಯುತ 'ಮಾತೃಭೂಮಿ'ಯಾಗಿ ಆರಾಧಿಸಿ 'ವಂದೇ ಮಾತರಂ' ಎಂದು ನಮಿಸಿದರು."

### ಅಖಂಡ ವಂದೇ ಮಾತರಂ: ಒಂದು ಸಾಂಸ್ಕೃತಿಕ-ರಾಷ್ಟ್ರೀಯ ಹೋರಾಟ

ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿ, ನಂತರ ರಾಷ್ಟ್ರನಾಯಕರಾಗಿ ದಶಕಗಳ ಕಾಲ ಸೇವೆ ಸಲ್ಲಿಸಿದ ಶ್ರೀ ಅನಂತಕುಮಾರ್ ಅವರಿಗೆ ವಂದೇ ಮಾತರಂ ಕೇವಲ ಗೀತೆಯಾಗಿರಲಿಲ್ಲ; ಅದು ಜೀವನದ ಮೌಲ್ಯವಾಗಿತ್ತು. ಸ್ವಾತಂತ್ರ್ಯ ಹೋರಾಟದ ಈ ಕ್ರಾಂತಿಗೀತೆಯನ್ನು "ಜಾತ್ಯತೀತತೆ" ಎಂಬ ತಪ್ಪು ವ್ಯಾಖ್ಯಾನದ ಹೆಸರಿನಲ್ಲಿ, ಅಥವಾ ರಾಜಕೀಯ ಕಾರಣಗಳಿಂದಾಗಿ, ಸಂಪೂರ್ಣವಾಗಿ ಹಾಡದೆ ಕತ್ತರಿಸುವ ಪ್ರವೃತ್ತಿ ಬೆಳೆದಿತ್ತು. ಇದು ಅನೇಕ ರಾಷ್ಟ್ರಭಕ್ತರ ಮನಸ್ಸಿಗೆ ನೋವು ತಂದ ವಿಷಯವಾಗಿತ್ತು.

### ಹೊಸಸಹಸ್ರಮಾನದ ಸಂಕಲ್ಪ: ವಂದೇ ಮಾತರಂ ಅಭಿಯಾನ

ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಸರ್ಕಾರದಲ್ಲಿ ಯುವಜನ, ಕ್ರೀಡೆ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಅನಂತಕುಮಾರ್ ಅವರು ಈ ನಿರ್ಬಂಧಗಳನ್ನು ಮುರಿದು, "ಅಖಂಡ ವಂದೇ ಮಾತರಂ" ಕಲ್ಪನೆಯನ್ನು ಜಾರಿಗೆ ತಂದರು.ಭಾರತವು ಹೊಸ ಸಹಸ್ರಮಾನಕ್ಕೆ ಕಾಲಿಡುವ ಮಹತ್ವದ ಕ್ಷಣವನ್ನು ಅಖಂಡ ವಂದೇ ಮಾತರಂ ಗೀತಗಾಯನದ ಮೂಲಕ ಆಚರಿಸಬೇಕು ಎಂದು ಅವರು ನಿರ್ಧರಿಸಿದರು. ಇದು ಸಾಂಸ್ಕೃತಿಕ ಕಾರ್ಯಕ್ರಮ ಮಾತ್ರವಲ್ಲ; ಅದು ರಾಷ್ಟ್ರದ ಆತ್ಮಗೌರವದ ಘೋಷಣೆಯಾಗಿತ್ತು. ೨೦೦೦ನೇ ಇಸವಿಯ ಹೊಸ ಸಹಸ್ರಮಾನವನ್ನು ಕೇವಲ ಸಂಭ್ರಮಾಚರಣೆಯಾಗಿ ನೋಡದೆ, ರಾಷ್ಟ್ರದ ಪುನರ್‌ನಿರ್ಮಾಣದ ಕ್ಷಣವನ್ನಾಗಿ ಪರಿವರ್ತಿಸಿದ ಶ್ರೇಯಸ್ಸು ಅನಂತಕುಮಾರ್ ಅವರಿಗೆ ಸಲ್ಲುತ್ತದೆ.




ನ್ಯಾಷನಲ್ ರಿಕನ್‌ಸ್ಟ್ರಕ್ಷನ್ ಕಾರ್ಪ್ಸ್ (NRC): ದೇಶದ ೫೪೦ ಜಿಲ್ಲೆಗಳಲ್ಲಿ ಲಕ್ಷಾಂತರ ಯುವಕರನ್ನು ಸಂಘಟಿಸಿ, ಅವರಿಗೆ ವಂದೇ ಮಾತರಂನ ಸ್ಫೂರ್ತಿ ನೀಡಲಾಯಿತು. ೧೯೯೯ ಡಿಸೆಂಬರ್ ೩೧ರ ಮಧ್ಯರಾತ್ರಿ ಇಡೀ ದೇಶ "ಅಖಂಡ ವಂದೇ ಮಾತರಂ" ಗೀತೆಯ ಮೂಲಕ ಹೊಸ ಯುಗವನ್ನು ಸ್ವಾಗತಿಸಿತು. ದೆಹಲಿಯ ಇಂಡಿಯಾ ಗೇಟ್ ಆವರಣದಲ್ಲಿ ಮೊಳಗಿದ ಆ ದನಿ, ಇಂದಿನ ಯುವ ಪೀಳಿಗೆಗೂ ದೇಶಭಕ್ತಿಯ ಪಾಠವಾಗಿದೆ.

ಇತ್ತೀಚಿನ ದಿನಗಳಲ್ಲಿ ಸಂಸತ್ತಿನಲ್ಲಿ ವಂದೇ ಮಾತರಂ ಕುರಿತು ನಡೆಯುತ್ತಿರುವ ಚರ್ಚೆಗಳು ಈ ಗೀತೆಯ ಪ್ರಸ್ತುತತೆಯನ್ನು ಮತ್ತೆ ನೆನಪಿಸುತ್ತಿವೆ. ವಂದೇ ಮಾತರಂ ಸಂವಿಧಾನ ವಿರೋಧಿಯೇ? ಎಲ್ಲರೂ ಹಾಡಬೇಕೇ? ಎಂಬ ಪ್ರಶ್ನೆಗಳು ಮತ್ತೆ ಕೇಳಿಬರುತ್ತಿವೆ. ಆದರೆ ಸುಪ್ರೀಂ ಕೋರ್ಟ್ ಸೇರಿದಂತೆ ಭಾರತದ ನ್ಯಾಯಾಂಗ ವ್ಯವಸ್ಥೆ ಸ್ಪಷ್ಟವಾಗಿ ಹೇಳಿದೆ: ವಂದೇ ಮಾತರಂ ರಾಷ್ಟ್ರಗೀತೆಯಾಗಿದ್ದು, ಅದು ದೇಶಭಕ್ತಿಯ ಸಂಕೇತ; ಅದನ್ನು ಗೌರವಿಸುವುದು ನಾಗರಿಕ ಧರ್ಮ, ಆದರೆ ಯಾರ ಮೇಲೂ ಬಲವಂತವಿಲ್ಲ.

ಇಲ್ಲಿ ಪ್ರಶ್ನೆ ಕಾನೂನಿನಲ್ಲ, ಮನೋಭಾವದದ್ದು. ವಂದೇ ಮಾತರಂ ಯಾವ ಧರ್ಮವನ್ನೂ ವಿರೋಧಿಸುವುದಿಲ್ಲ; ಅದು ಮಾತೃಭೂಮಿಯ ಆರಾಧನೆ. ವಂದೇ ಮಾತರಂ ಮತ್ತೆ ನಮ್ಮನ್ನು ಒಗ್ಗೂಡಿಸುವ ಶಕ್ತಿಯಾಗಿದೆ. ವಂದೇ ಮಾತರಂ ವಿವಾದವಲ್ಲ. ಅದು ವಿಚಾರ. ಅದು ದೇಶವನ್ನು ವಿಭಜಿಸುವ ಗೀತೆಯಲ್ಲ; ಒಗ್ಗೂಡಿಸುವ ಆತ್ಮಧ್ವನಿ. ಸಮಸ್ಯೆ ಅದನ್ನು ಕೇಳುವ ಕಿವಿಗಳಲ್ಲ, ಅರ್ಥಮಾಡಿಕೊಳ್ಳುವ ಮನಸ್ಸಿನಲ್ಲಿದೆ. ಇಂದು ದೇಶಕ್ಕೆ ಬೇಕಾಗಿರುವುದು ಮತ್ತೊಂದು ಘೋಷಣೆಯಲ್ಲ. ವಂದೇ ಮಾತರಂನ ಅರ್ಥವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ. ಅದೇ ಈ ಗೀತೆಗೆ ಸಲ್ಲುವ ನಿಜವಾದ ಗೌರವ.

ಪುಟ 1 ರಿಂದ

## ರಾಷ್ಟ್ರ ನಿರ್ಮಾಣಕ್ಕೆ ಯುವಶಕ್ತಿ: 'ಯುವ ರಾಯಭಾರಿ' ತರಬೇತಿ ಶಿಬಿರ ಯಶಸ್ವಿ

ಪ್ಲಾಸ್ಟಿಕ್ ತ್ಯಾಜ್ಯವನ್ನು ಸೇವಿಸುವುದರಿಂದ ಹಸುಗಳಂತಹ ಪ್ರಾಣಿಗಳ ಜೀವಕ್ಕೆ ಉಂಟಾಗುತ್ತಿರುವ ಅಪಾಯವನ್ನು ವಿವರಿಸಿದ ಅವರು, ಕೇವಲ ಪ್ಲಾಸ್ಟಿಕ್ ನಿರ್ಮೂಲನೆಗೆ ಸೀಮಿತವಾಗದೆ ಪ್ರಕೃತಿಯನ್ನು ಪ್ರೀತಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಇದರ ಮುಂದುವರಿದ ಭಾಗವಾಗಿ, ಹಸಿರು ಪರಿಸರದ ಮಹತ್ವವನ್ನು ತಿಳಿಸಲು ವಿವಿಧ ಜಾತಿಯ ಮರಗಳನ್ನು ಗುರುತಿಸುವ ಕೌಶಲವನ್ನು ಕಲಿಸಿದ ಅವರು, ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳುವಲ್ಲಿ ಪ್ರತಿಯೊಂದು ಮರವೂ ವಹಿಸುವ ವಿಶಿಷ್ಟ ಪಾತ್ರದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಿದರು.

ಈ ಶಿಬಿರದ ವಿಶೇಷತೆಯೆಂದರೆ ವಿದ್ಯಾರ್ಥಿಗಳ ಪ್ರಾಯೋಗಿಕ ಪಾಲ್ಗೊಳ್ಳುವಿಕೆ. ಹಿಂದಿನ ಶಿಬಿರದಲ್ಲಿ ತರಬೇತಿ ಪಡೆದ ಯುವ ರಾಯಭಾರಿಗಳು ತಮ್ಮ ಮನೆ ಹಾಗೂ ಶಾಲೆಗಳಲ್ಲಿ ಮಾತ್ರವಲ್ಲದೆ, ನೆರೆಹೊರೆಯ ಶಾಲೆಗಳಿಗೂ ಭೇಟಿ ನೀಡಿ ಪ್ಲಾಸ್ಟಿಕ್ ಮುಕ್ತ ಸಮಾಜದ ಬಗ್ಗೆ ಜಾಗೃತಿ ಮೂಡಿಸಿ ತಾವು ತಂದಿರುವ ಸಕಾರಾತ್ಮಕ ಬದಲಾವಣೆ ಮತ್ತು ಅನುಭವಗಳನ್ನು ಹಂಚಿಕೊಂಡರು.

ಶಿಬಿರದಲ್ಲಿ ಪ್ರೊ. ಪೂರ್ಣಪ್ರಜ್ಞ ಎಂ.ಜಿ. ಅವರು ಮರದ ಎಲೆಯ ಜೀವಿತಾವಧಿ ಮತ್ತು ಅದರ ಉಪಕಾರಗಳ ಕುರಿತು ವಿವರಿಸಿದರೆ, ನಯನಾ ಎಸ್. ಅವರು ಕನ್ನಡ ಸಾಮ್ರಾಜ್ಯದ ಅಡಿಪಾಯ ಹಾಕಿದ ಕದಂಬ ದೊರೆ ಮಯೂರವರ್ಮನ ಐತಿಹಾಸಿಕ ಸಾಹಸಗಾಥೆಯನ್ನು ಮಕ್ಕಳಿಗೆ ಪರಿಚಯಿಸಿದರು.



ಯುವ ರಾಯಭಾರಿ' ಉಪಕ್ರಮವು ಕೇವಲ ಪಠ್ಯಕ್ರಮದ ಕಲಿಕೆಯಲ್ಲ, ಬದಲಾಗಿ ಮಕ್ಕಳಲ್ಲಿ ರಾಷ್ಟ್ರೀಯ ಹೆಮ್ಮೆ, ಸಾಮಾಜಿಕ ಸಾಮರಸ್ಯ ಮತ್ತು ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸುವ ಮೂಲಕ ಅವರನ್ನು ಮುಂದಿನ ತಲೆಮಾರಿನ ನಾಯಕರನ್ನಾಗಿ ರೂಪಿಸುವ ರಾಷ್ಟ್ರ ನಿರ್ಮಾಣದ ಮಹತ್ವದ ಹೆಜ್ಜೆಯಾಗಿದೆ.

# ಅನಂತಕುಮಾರ್ ಅವರೊಂದಿಗಿನ ಅಚ್ಚಳಿಯದ ನೆನಪುಗಳು

**ನಾನು ಕಂಡಂತೆ**



**ಅನಂತಕುಮಾರ್**

**-ವೇಣುಗೋಪಾಲ್ ಎಚ್.ಕೆ.
ತುಮಕೂರು**

ಕೆಲವು ಭೇಟಿಗಳು ಕೇವಲ ಪರಿಚಯವಾಗಿ ಉಳಿಯುತ್ತವೆ; ಇನ್ನು ಕೆಲವು ಬದುಕಿನ ದಿಕ್ಕನ್ನೇ ಬದಲಿಸುತ್ತವೆ. 1983ರ ಆಗಸ್ಟ್ ತಿಂಗಳು ನನ್ನ ಪಾಲಿಗೆ ಅಂತಹದೊಂದು ತಿರುವು ನೀಡಿದ ಕಾಲ. ನಾನು ಬಾಲ್ಯದಿಂದಲೇ ಸಂಘದ ಸಂಪರ್ಕದಲ್ಲಿದ್ದರೂ, ಸಂಘ ಪರಿವಾರದ ಆಂತರಿಕ ಕಾರ್ಯವೈಖರಿಯನ್ನು ಹತ್ತಿರದಿಂದ ಕಂಡಿರಲಿಲ್ಲ. ತುಮಕೂರಿನಿಂದ ಶಿವಮೊಗ್ಗದಲ್ಲಿ ನಡೆದ ಎಬಿವಿಪಿ ಅಭ್ಯಾಸ ವರ್ಗಕ್ಕೆ ಹೋದಾಗ, ನನ್ನ ವ್ಯಕ್ತಿತ್ವಕ್ಕೆ ನಿಜವಾದ ರೂಪ ಸಿಗಲಾರಂಭಿಸಿತು. ಅಲ್ಲೇ ನಾನು ಮೊದಲ ಬಾರಿಗೆ ಶ್ರೀ ಅನಂತಕುಮಾರ್ ಜಿ ಅವರನ್ನು ಭೇಟಿಯಾದದ್ದು.

ಅಂದು ತುಮಕೂರು ವಿಭಾಗ ಪ್ರಚಾರಕರಾಗಿದ್ದ ಶ್ರೀ ದಾಸೇಗೌಡರು ನನ್ನನ್ನು ಅನಂತಕುಮಾರ್ ಅವರಿಗೆ ಪರಿಚಯಿಸಿದರು. ಊಟಕ್ಕೆ ಹೋಗುವ ದಾರಿಯಲ್ಲಿ ನಡೆದ ಆ ಮೊದಲ ಭೇಟಿ ಇಂದಿಗೂ ಹಸಿರಾಗಿದೆ. ನನ್ನ ಎತ್ತರವನ್ನು ಗಮನಿಸಿದ ಅನಂತಕುಮಾರ್ ಜಿ, ಪಕ್ಕದಲ್ಲೇ ಇದ್ದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ನೋಡಿ, "ವೇಣು ನಿಮಗೆ ಸ್ಪರ್ಧಿ ನೋಡಿ – ಅಂದರೆ ಎತ್ತರದಲ್ಲಿ ಮಾತ್ರ!" ಎಂದು ಚಟಾಕಿ ಹಾರಿಸಿದರು.. ನಾವು ಮನಸ್ಪೂರ್ತಿಯಾಗಿ ನಗುವಂತೆ ಮಾಡಿದ ಆ ಕ್ಷಣ, ಅವರ ದೊಡ್ಡ, ನಿಷ್ಕಲ್ಮಷ ನಗು ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚೊತ್ತಿತು. ಆ ಮೂರು ದಿನಗಳಲ್ಲಿ ಪಿ.ವಿ.ಕೆ, ದತ್ತಾಜಿಯವರು ಮತ್ತು ಅನಂತಕುಮಾರ್ ಜಿಯವರ ಒಡನಾಟ ನನ್ನ ಜೀವನಕ್ಕೆ ಒಂದು ದಿಕ್ಸೂಚಿಯಾಯಿತು.



ಕೆಲವು ತಿಂಗಳುಗಳ ನಂತರ ಬೆಂಗಳೂರಿನ ಕಾಟನ್‌ಪೇಟೆ ಕಚೇರಿಯಲ್ಲಿ ಅವರನ್ನು ಮತ್ತೆ ಭೇಟಿಯಾದೆ. ಅವರು ನಮ್ಮನ್ನು ಊಟಕ್ಕೆ ಕರೆದುಕೊಂಡು ಹೋಗಿ, ತಮ್ಮ ಸಹಜ ಹಾಸ್ಯದ ಮೂಲಕ ಎಲ್ಲರ ಮನಸ್ಸನ್ನು ಹಗುರಾಗಿಸಿದರು. ಆದರೆ ಅವರ ವ್ಯಕ್ತಿತ್ವದಲ್ಲಿ ಹಾಸ್ಯದಷ್ಟೇ ಗಾಂಭೀರ್ಯವೂ ಇತ್ತು ಎನ್ನುವುದು ನನಗೆ ರಾಯಚೂರು ಅಭ್ಯಾಸ ವರ್ಗದಲ್ಲಿ ತಿಳಿಯಿತು. ಅಲ್ಲಿ ಎಬಿವಿಪಿ ಗೋಡೆಪತ್ರಿಕೆಗೆ ನಾನು ಬರೆದ ಲೇಖನವೊಂದನ್ನು ಓದಿದ ಅವರು, "ಬರಹ ಎಂದರೆ ಕೇವಲ ಪದಗಳ ಜೋಡಣೆಯಲ್ಲ. ಅದಕ್ಕೊಂದು ಸ್ಪಷ್ಟ ಗುರಿ ಇರಬೇಕು, ಸಂದೇಶವಿರಬೇಕು. ಇಲ್ಲಿ ಅಸ್ಪಷ್ಟತೆ ಮತ್ತು ಉಡಾಫೆಗೆ ಜಾಗವಿಲ್ಲ," ಎಂದು ಖಡಕ್ಕಾಗಿ ಹೇಳಿದರು. ಅಂದು ನಾನು ಅವರ ವ್ಯಕ್ತಿತ್ವದ ಮತ್ತೊಂದು ಮುಖವನ್ನು ಕಂಡೆ. ಅವರ ಚಿಂತನೆಗಳಲ್ಲಿ ಎಂದಿಗೂ ಲಘುತನವಿರಲಿಲ್ಲ, ಬದ್ಧತೆ ಮಾತ್ರವಿತ್ತು.

**ಸಮಾನತೆಯ ಸರಳ ಪಾಠ**

ಗೌರಿಬಿದನೂರು ಶಿಬಿರದಲ್ಲಿ (1985-86) ಮೀಸಲಾತಿಯ ಕುರಿತಾದ ಚರ್ಚೆಯಲ್ಲಿ ನಾನು ಅವರೊಂದಿಗೆ ವಾದಕ್ಕಿಳಿದಿದ್ದೆ. ಮೇಲ್ವರ್ಗದ ವಿದ್ಯಾರ್ಥಿಗಳ ಆತಂಕಗಳನ್ನು ಮುಂದಿಟ್ಟು ನಾನು ಪ್ರಶ್ನಿಸಿದಾಗ, ಅವರು ನೀಡಿದ ಉತ್ತರ ಇಂದಿಗೂ ನನ್ನ ಕಿವಿಯಲ್ಲಿ ಆವರಿಸಿದೆ. "ಒಂದು ಚೆನ್ನಾಗಿ ಪೋಷಿಸಲ್ಪಟ್ಟ ಕುದುರೆ ಮತ್ತು ಒಂದು ಅಪೌಷ್ಟಿಕ ಕುದುರೆ ಒಂದೇ ಸ್ಪರ್ಧೆಯಲ್ಲಿ ಓಡಿದರೆ ಅದು ನ್ಯಾಯವೇ?" ಎಂದು ಅವರು ಕೇಳಿದರು. ಆ ಒಂದೇ ಉದಾಹರಣೆ ನನ್ನ ಎಲ್ಲ ಗೊಂದಲಗಳನ್ನು ಪರಿಹರಿಸಿತು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಸಮಾನವಾಗಿ ನಡೆಯುವಂತಾಗುವವರೆಗೆ ಮೀಸಲಾತಿಯ ಅಗತ್ಯವನ್ನು ಅವರು ಅಂದು ಮನಮುಟ್ಟುವಂತೆ ವಿವರಿಸಿದ್ದರು. 1991ರ ನಂತರ ಮೀಸಲಾತಿ ಕೇವಲ ರಾಜಕೀಯ ಅಸ್ತ್ರವಾಯಿತೇ ಹೊರತು, ಅನಂತಕುಮಾರ್ ಜಿ ಕಂಡ ಆಶಯ ಈಡೇರಲಿಲ್ಲ ಎಂಬುದು ಬೇಸರದ ಸಂಗತಿ.

**ಕುದುರೆಯೇರಿದ ನಾಯಕ**

ಎಲ್ಲಕ್ಕಿಂತ ಮುಖ್ಯವಾಗಿ, 1986ರಲ್ಲಿ ತುಮಕೂರು ತಂಡದೊಂದಿಗೆ ಹೋಗಿದ್ದ ಪ್ರವಾಸದಲ್ಲಿ ನಡೆದ ಒಂದು ಘಟನೆ ನನಗೆ ಸದಾ ನೆನಪಾಗುತ್ತದೆ. ಊಟದ ನಂತರ ಅವರು, "ನಿಮ್ಮ ಜೀವನದ ಕನಸು ಏನು?" ಎಂದು ನಮ್ಮನ್ನು ಕೇಳಿದರು. ಎಲ್ಲರ ಉತ್ತರ ಮುಗಿದ ಮೇಲೆ, ನಾವೇ ಅವರ ಕನಸೇನು ಎಂದು ಕೇಳಿದೆವು. ಆಗ ಅವರು ನಗುತ್ತಾ ಹೇಳಿದರು: "ನಾನು ಕುದುರೆಯ ಮೇಲೆ ಕತ್ತಿ ಹಿಡಿದು, ಈ ದೇಶಕ್ಕೆ ಸೇವೆ ಸಲ್ಲಿಸುವ ಒಬ್ಬ ರಾಜನಾಗಬೇಕು." ಅಂದು ನಮಗೆ ಅದು ತಮಾಷೆಯಂತೆ ಕಂಡಿರಬಹುದು. ಆದರೆ ಇಂದು ಹಿಂತಿರುಗಿ ನೋಡಿದಾಗ ಅನ್ನಿಸುತ್ತದೆ – ಅವರು ತಮ್ಮ ಕನಸನ್ನು ಅಕ್ಷರಶಃ ಬದುಕಿದರು. ಅವರು ಕುದುರೆಯ ಬದಲು ಪ್ರಜಾಪ್ರಭುತ್ವದ ರಥವೇರಿದರು, ಕತ್ತಿಯ ಬದಲು ಜನಸೇವೆಯ ಅಸ್ತ್ರ ಹಿಡಿದರು. ಲಕ್ಷಾಂತರ ಜನರ ಹೃದಯ ಸಾಮ್ರಾಜ್ಯದ ರಾಜನಾಗಿ ಮೆರೆದರು.

ಇಂದಿನ ರಾಜಕೀಯದ ಮಿತಿಗಳನ್ನು ಮೀರಿದ ಅವರ ದಾರ್ಶನಿಕ ವ್ಯಕ್ತಿತ್ವ ಮತ್ತು ಆ ನಗುವಿನ ನೆನಪು, ನಮ್ಮೆಲ್ಲರ ಹೃದಯದಲ್ಲಿ ಸದಾ ಚೈತನ್ಯವನ್ನು ತುಂಬುತ್ತಲೇ ಇರುತ್ತದೆ."

**ಪುಟ 3 ರಿಂದ.**

**ಧಮನಿಯಲ್ಲಿ ನಾಯಕತ್ವ ಗುಣಗಳು**

ಅಭ್ಯಾಸವರ್ಗದಲ್ಲಿ ನಿರ್ದಿಷ್ಟ ಉಪನ್ಯಾಸಕ್ಕೆ ಯಾರನ್ನು ಕರೆಯಬೇಕು, ಈ ಸಂವಾದ ಕಾರ್ಯಕ್ರಮಗಳಲ್ಲಿ ಚರ್ಚೆಗೆ ಯಾವ ಯಾವ ವಿಷಯಗಳಿರತಕ್ಕದ್ದು ಎನ್ನುವುದರಿಂದ ಮೊದಲುಗೊಂಡು ನಿರ್ದಿಷ್ಟ ವಿಷಯದ ಬಗೆಗೆ ಮಾತನಾಡಬಲ್ಲ ತಜ್ಞರು ಯಾರು, ಇಲ್ಲವೇ ಯಾರನ್ನು ಕರೆಸುವುದು ಸೂಕ್ತವೆಂಬುದನ್ನು ತಿಳಿಯಲು ಯಾರನ್ನು ಸಂಪರ್ಕಿಸಬೇಕು ಎಂಬ ಅಂಶದವರೆಗೆ ಪ್ರತಿಯೊಂದು ಸೂಚನೆಯನ್ನೂ ಅನಂತಕುಮಾರ್ ಅತಿ ಸಮರ್ಪಕವಾಗಿ ಮುಂದಿಡುತ್ತಿದ್ದರು. ನಾಯಕತ್ವ ವಹಿಸಬೇಕಾದವನಿಗೆ ಇರಬೇಕಾದ ವ್ಯಾಪಕವಾದ ವಿಷಯ ಪರಿಜ್ಞಾನ ಮಾತ್ರವಲ್ಲದೆ, ವಿಷಯಗ್ರಹಣೆಯ ಬಗೆಗೂ ಅವರು ಸದಸ್ಯರಿಗೆ ತಿಳಿಹೇಳುತ್ತಿದ್ದ ಪರಿ ಅಸಾಧಾರಣವಾಗಿತ್ತು. ಅವರ ಮಾತುಗಳು ನಾಯಕತ್ವದ ಪರಿಯನ್ನೇ ಬೋಧಿಸುತ್ತಿವೆಯೋ ಎನ್ನುವಂತೆ , ಸಾಮಾನ್ಯ ಕಾರ್ಯಕರ್ತರಲ್ಲೂ ನಾಯಕತ್ವದ ಗುಣಗಳನ್ನು ಪ್ರೇರಿಸುವುದರಲ್ಲಿ ಪರಿಣಾಮಕಾರಿಯಾಗಿರುತ್ತಿದ್ದವು. ಅಂದರೆ, ನಾಯಕತ್ವದ ಹಾದಿಯಲ್ಲಿ ಅನಂತಕುಮಾರ ಒಬ್ಬರೇ ಮುಂದೆ ಹೋಗುತ್ತಿದ್ದರು ಎಂದು ತೋರುತ್ತಲೇ ಇರಲಿಲ್ಲ , ಅಲ್ಲಿದ್ದ ಸದಸ್ಯರೆಲ್ಲರನ್ನೂ, ಹುಬ್ಬಳ್ಳಿ ಧಾರವಾಡ ಭಾಗದಲ್ಲಿದ್ದ ಪ್ರತಿಯೊಬ್ಬರನ್ನೂ ಅವರು ತಮ್ಮ ಜೊತೆಗೇ ಮುಂದಕ್ಕೆ ಕರೆದೊಯ್ಯುತ್ತಿದ್ದರು

ಇಂಥ ಯಾವುದೇ ಸಮ್ಮೇಳನ ಅದು ರಾಜ್ಯಮಟ್ಟದ್ದಿರಲಿ, ರಾಷ್ಟ್ರಮಟ್ಟದ್ದಿರಲಿ ಅನಂತಕುಮಾರ್ ತಪ್ಪದೆ ಭಾಗವಹಿಸುತ್ತಿದ್ದರು. ಅದೂ ಒಬ್ಬರೇ ಅಲ್ಲ, ಒಂದು ಗುಂಪನ್ನೇ ತಮ್ಮೊಡನೆ ಹೊರಡಿಸುತ್ತಿದ್ದರು. ಯಾವ ಊರಿನಿಂದ ಯಾರು ಬರಬೇಕು, ಯಾವ ಕಾಲೇಜಿನಿಂದ ಯಾರು ಭಾಗವಹಿಸಬೇಕು ಎಲ್ಲವನ್ನೂ ಪಟ್ಟಿಮಾಡಿಸುವವರೂ ಅವರೇ. ಸುಮ್ಮನೆ ಯಾರದ್ದೋ ಹೆಸರು ಸೇರಿಸುವುದಲ್ಲ, ತಮ್ಮ ಅಭ್ಯಾಸವರ್ಗದಲ್ಲಿ ಭಾಗವಹಿಸುತ್ತಿರುವವರು ಯಾರು, ತಮ್ಮ ಗುಂಪಿನ ಸದಸ್ಯರು ಯಾರಿದ್ದಾರೆ, ಸಮಾನಮನಸ್ಕ ಆಸಕ್ತರು ಯಾರಿದ್ದಾರೆ ಎಲ್ಲರನ್ನೂ ನೆನಪುಮಾಡಿಕೊಂಡು ಇಂತಿಂಥ ಸಮ್ಮೇಳನದಲ್ಲಿ ಭಾಗವಹಿಸಬೇಕಾದವರು ಯಾರು ಎಂಬ ಪಟ್ಟಿಯನ್ನು ತಯಾರುಮಾಡಿಸುತ್ತಿದ್ದರು. ಯಾರು ಯಾರು ಎಲ್ಲೆಲ್ಲಿಂದ ಹೊರಡಬೇಕು, ಎಲ್ಲಿ ಸೇರಬೇಕು ಎಂಬ ಚಿಕ್ಕಪುಟ್ಟ ವಿಷಯಗಳೂ ನಮೂದಾಗುವಷ್ಟು ನಿಖರವಾಗಿ ಕಾರ್ಯಕ್ರಮವನ್ನು ಸಿದ್ಧಪಡಿಸಲು ಅನಂತಕುಮಾರರ ಮಾರ್ಗಸೂಚಿ ಸದಾ ನೆರವಿಗೆ ಒದಗುತ್ತಿತ್ತು.

ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ಡ್ರಾಂಗ್ ಡ್ರೂಂಗ್' ಹೆಸರಿನ ಹಿಮನದಿ!



**'ಹಿಮನದಿ' ಎಂದರೇನು ಗೊತ್ತೆ?** ಗಟ್ಟಿ ಮೊಸರಿನ ಹಾಗೆ ಹಿಮ ಪರ್ವತಗಳ ನಡುವೆ ಹೆಪ್ಪುಗಟ್ಟಿರುವ ನದಿ. ನಾವು ಅದರ ಮೇಲೆ ಓಡಾಡಬಹುದು. ಜಾರು ಬಂಡಿ ಆಟ ಆಡಬಹುದು. ದೋಣಿ ವಿಹಾರ ಮಾಡುವಂತಿಲ್ಲ; ಬಲೆ ಹಾಕಿ ಮೀನು ಹಿಡಿಯುವಂತಿಲ್ಲ! ಇಂಗ್ಲಿಷ್‌ನಲ್ಲಿ ಅವಕ್ಕೆ 'ಗ್ಲೇಸಿಯರ್' (Glaciers) ಎನ್ನುತ್ತಾರೆ.

ಭಾರತದಲ್ಲಿ ಹಿಮಾಲಯ ಮತ್ತು ಕಾರಾಕೋರಂ ಪರ್ವತಗಳ ನಡುವೆ ಅಂಥ ನೂರಾರು ಹಿಮನದಿಗಳಿವೆ. ಚಳಿಗಾಲದಲ್ಲಿ ಗುಡ್ಡ ಕಣಿವೆಗಳ ಮೇಲೆ ಭಾರೀ ಹಿಮ ಸುರಿದಾಗ ಅವು ಮೆಲ್ಲಗೆ ಜಾರುತ್ತ ಕಣಿವೆಗಳಲ್ಲಿ ಹರಿಯುತ್ತವೆ. ಅವು ಸಾಗುವ ವೇಗ ಗೊತ್ತೆ? ದಿನಕ್ಕೆ ಸರಾಸರಿ ಅರ್ಧ ಮೀಟರ್ ಅಷ್ಟೆ!

ಲಡಾಖ್‌ನಲ್ಲಿ ಕಾರ್ಗಿಲ್ ಪಟ್ಟಣದ ಸಮೀಪ 'ಡ್ರಾಂಗ್ ಡ್ರೂಂಗ್' ಹಿಮನದಿ ಇದೆ. ಕೇವಲ 23 ಕಿಲೊಮೀಟರ್ ದೂರಕ್ಕೆ ಹರಿದು, ಕೊನೆಯಲ್ಲಿ ಕರಗಿನೀರಾಗಿ ಮುಂದೆ ಸಿಂಧೂ ನದಿಯನ್ನು ಸೇರುತ್ತದೆ.

ಬೇಸರದ ಸಂಗತಿ ಏನೆಂದರೆ ಜಗತ್ತಿನೆಲ್ಲ ಕಡೆ ಹಿಮನದಿಗಳು ಶೀಘ್ರ ಕರಗುತ್ತಿವೆ. ಏಕೆಂದರೆ ಭೂಮಿಯ ತಾಪಮಾನ ವರ್ಷವರ್ಷಕ್ಕೆ ಹೆಚ್ಚುತ್ತಿದೆ. 'ಕರಗುವುದು' ಎಂದರೆ ಅವುಗಳ ತುದಿ ಕರಗಿ ಕರಗಿ ನದಿಯೇ ಗಿಡ್ಡವಾಗುತ್ತದೆ. ಒಂದು ದಿನ ಕಣ್ಮರೆಯೇ ಆಗಿಬಿಡಬಹುದು ಹಿಮಾಲಯದ ಗ್ಲೇಸಿಯರ್‌ಗಳು ಕಣ್ಮರೆ ಆದರೆ ಗಂಗಾ-ಯಮುನಾ ನದಿಗಳೂ ಕ್ರಮೇಣ ಬತ್ತಿ ಹೋಗುತ್ತವೆ.

ಈ ಬಗ್ಗೆ ನಾವೆಲ್ಲ ಚಿಂತೆ ಮಾಡಬೇಕೆಂದೇ 2025ನ್ನು 'ಅಂತಾರಾಷ್ಟ್ರೀಯ ಹಿಮನದಿಗಳ ಸಂರಕ್ಷಣೆಯ ವರ್ಷ' ಎಂದು ಹೆಸರಿಸಲಾಗಿತ್ತು. ಅಂಥ ಹಿಮನದಿಗಳನ್ನು ಹೇಗೆ ಸಂರಕ್ಷಣೆ ಮಾಡಬಹುದು?

**ನೀವು ನಿಮ್ಮನಿಮ್ಮಲ್ಲೇ ಚರ್ಚಿಸಿ, ಶಿಕ್ಷಕರ ಜೊತೆಗೂ ಈ ವಿಷಯವನ್ನು ಪ್ರಸ್ತಾಪ ಮಾಡಬಲ್ಲಿರಾ?**

# ಡ್ರೋನ್ ದೀದಿ ಮತ್ತು ಜೇನು ದೀದಿ



ಮನೆಯಲ್ಲಿ ಊಟದ ಸಮಯದಲ್ಲಿ ಹಿರಿಯ ಗಂಡಸರ ಬದಲು ಅಮ್ಮ, ಚಿಕ್ಕಮ್ಮ, ಅಕ್ಕ, ದೊಡ್ಡಮ್ಮ, ಆಂಟಿ ಯರೇ ನೆನಪಾಗುತ್ತಾರೆ, ಸರಿ ತಾನೆ? ಊಟದ ತಟ್ಟೆಗೆ ಬರುವ ಮುದ್ದೆ, ಸಾರು, ಅನ್ನ, ಪಲ್ಲೆ ಹೀಗೆ ಎಲ್ಲ ಆಹಾರ ಉತ್ಪಾದನೆಯಲ್ಲೂ ಅವರೇ ಮುಂದು. ಕೃಷಿ, ಡೇರಿ, ಕೋಳಿ ಸಾಕಣೆ, ಮೀನುಗಾರಿಕೆ ಅಷ್ಟೇ ಅಲ್ಲ, ಅವುಗಳ ಸಾಗಾಟ, ಸಂಸ್ಕರಣೆ, ಮಾರಾಟ, ಕೊನೆಗೆ ಅಡುಗೆಯವರೆಗೂ ಅವರದೇ ಪಾತ್ರ ಇರುತ್ತದೆ. (ಗಂಡಸರು ಹೊಲದಲ್ಲಿ ಹೆಚ್ಚಾಗಿ ಟ್ರಾಕ್ಟರ್ ಓಡಿಸುವ, ಭಾರ ಎತ್ತುವ ಕೆಲಸ ಮಾಡುತ್ತಾರೆ. ಸಂಕ್ರಾಂತಿಯಲ್ಲಿ ಕಿಚ್ಚು ಹಾಯಿಸುತ್ತಾರೆ). ಮಹಿಳೆಯರ ಶ್ರಮಕ್ಕೆ ಶಾಭಾಸ್ ಹೇಳಲೆಂದೇ 2026ನ್ನು 'ಜಾಗತಿಕ ಮಹಿಳಾ ಕೃಷಿಕರ ವರ್ಷ' ಎಂದು ವಿಶ್ವಸಂಸ್ಥೆ ಘೋಷಣೆ ಮಾಡಿದೆ



ಈಗೀಗ ಮಹಿಳೆಯರು ಕೃಷಿ ತಂತ್ರಜ್ಞಾನದಲ್ಲೂ ಉತ್ತಮ ಕೆಲಸ ಮಾಡುತ್ತಿದ್ದಾರೆ. ಭಾರತ ಸರ್ಕಾರದ 'ನಮೋ ಡ್ರೋನ್ ದೀದೀ' ಯೋಜನೆಯ ಬಗ್ಗೆ ನಿಮಗೆಲ್ಲ ಗೊತ್ತಿರಬೇಕು. ಮಹಿಳೆಯರು ಡ್ರೋನ್ ಬಳಸಿ ಹೊಲದಲ್ಲಿ ಬೀಜ, ಗೊಬ್ಬರ ಸಿಂಪಡನೆ ಮಾಡುವ ತರಬೇತಿ ಪಡೆಯುತ್ತಾರೆ. ಫಸಲು ಬೆಳೆದಾಗ ಹಕ್ಕಿಗಳನ್ನು, ಹಂದಿ, ಮೊಲಗಳನ್ನೂ ಡ್ರೋನ್ ಮೂಲಕವೇ ಓಡಿಸುವುದನ್ನು ಕಲಿಯುತ್ತಾರೆ. ಅವರಿಗೆ ಸರ್ಕಾರವೇ ಡ್ರೋನ್‌ಗಳನ್ನೂ ನೀಡುತ್ತದೆ. ಅಂಥ 'ಡ್ರೋನ್ ದೀದಿ'ಯರು ಎಲ್ಲರ ಅಚ್ಚುಮೆಚ್ಚು. 'ದೀದಿ' ಅಂದರೆ ಅಕ್ಕ.

ಈಗಂತೂ ಕೃಷಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಹುಡುಗಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಪದವಿ ಪಡೆಯಲು, ಸಂಶೋಧನೆ ನಡೆಸಲು ಮುಂದೆ ಬರುತ್ತಿದ್ದಾರೆ. ದೇಶ ವಿದೇಶಗಳಲ್ಲಿ ಹೊಸ ಫಸಲು, ಹೆಚ್ಚಿನ ಇಳುವರಿ, ಆಹಾರ ಸಂಸ್ಕರಣೆ, ಸಂರಕ್ಷಣೆ ಎಲ್ಲ ಕೆಲಸಗಳಿಗೆ ಹೆಣ್ಣು ಮಕ್ಕಳಿಗೆ ಆದ್ಯತೆ ಸಿಗುತ್ತಿದೆ. ಹುಡುಗಿಯರು ಕೃಷಿ ಕಾಲೇಜಿಗೆ ಅಥವಾ ಪಶುವೈದ್ಯಕೀಯ ಅಧ್ಯಯನಕ್ಕೆ ಹೋದರೆ ಉತ್ತಮ ಭವಿಷ್ಯವಿದೆ.

ನಿಮ್ಮ ಶಾಲೆಗೆ ಒಮ್ಮೆಯಾದರೂ ಒಬ್ಬರಾದರೂ ಕೃಷಿ ಪದವೀಧರೆಯನ್ನು ಕರೆಸಬೇಕೆಂದು ನೀವು ಅಧ್ಯಾಪಕರಿಗೆ ವಿನಂತಿ ಮಾಡಿಕೊಳ್ಳಿ. ಡ್ರೋನ್ ದೀದಿ ಅಥವಾ ಜೇನು ದೀದಿ ಯಾರಾದರೂ ಸರಿ. ಒಮ್ಮೆ ಬರಲಿ.

# ಎನ್‌ಐಟಿ ಕುರುಕ್ಷೇತ್ರ ಘಟಿಕೋತ್ಸವ: ಪ್ರೇರಣಾದಾಯಕ ಸಂದೇಶ



ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯ (ಎನ್‌ಐಟಿ) ಕುರುಕ್ಷೇತ್ರದಲ್ಲಿ ನವೆಂಬರ್ 30ರಂದು ನಡೆದ ಘಟಿಕೋತ್ಸವ ಸಮಾರಂಭವು ಯಶಸ್ವಿಯಾಗಿ ಜರುಗಿತು. ಸಮಾರಂಭದ ಮುಖ್ಯ ಅತಿಥಿಯಾಗಿಯೂ, ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿಯೂ ಭಾಗವಹಿಸಿದ್ದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪದವಿ ಪಡೆದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರೇರಣಾದಾಯಕ ಭಾಷಣ ಮಾಡಿದರು.

ಪದವಿ ಪಡೆದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, “ಇಂದು ನಿಮ್ಮ ಜೀವನದ ಒಂದು ಮಹತ್ವದ ಅಧ್ಯಾಯಕ್ಕೆ ಪೂರ್ಣವಿರಾಮ ಹಾಕಿ, ಮತ್ತೊಂದು ಹೊಸ ಅಧ್ಯಾಯಕ್ಕೆ ದಿಟ್ಟ ಹೆಜ್ಜೆ ಇಡುತ್ತಿರುವ ದಿನ” ಎಂದು ಹೇಳಿ, ಸಂಸ್ಕೃತದ ಪ್ರಸಿದ್ಧ ಶ್ಲೋಕವನ್ನು ಸ್ಮರಿಸಿದರು:

**“ವಿದ್ಯಾ ದದಾತಿ ವಿನಯಂ, ವಿನಯಾದ್ಯಾತಿ ಪಾತ್ರತಾಂ|**
**ಪಾತ್ರತ್ವಾತ್ ಧನಮಾಪ್ನೋತಿ,|ಧನಾತ್ ಧರ್ಮಂ ತತಃ ಸುಖಂ||**

ಈ ಶ್ಲೋಕದ ಅರ್ಥವನ್ನು ವಿವರಿಸುತ್ತಾ ಅವರು, “ಜ್ಞಾನವು ವಿನಯವನ್ನು ಕಲಿಸುತ್ತದೆ. ವಿನಯದಿಂದ ಯೋಗ್ಯತೆ ಮೂಡುತ್ತದೆ. ಯೋಗ್ಯತೆಯಿಂದ ಸಮೃದ್ಧಿ ಲಭಿಸುತ್ತದೆ. ಸಮೃದ್ಧಿಯಿಂದ ಧರ್ಮಾಚರಣೆ ಸಾಧ್ಯವಾಗುತ್ತದೆ. ಧರ್ಮದಿಂದಲೇ ನಿಜವಾದ ಸುಖ ದೊರೆಯುತ್ತದೆ. ಇದು ಕೇವಲ ಪಠ್ಯಶ್ಲೋಕವಲ್ಲ; ನಮ್ಮ ಬದುಕಿಗೆ ದಾರಿ ತೋರಿಸುವ ಜೀವನತತ್ತ್ವ” ಎಂದು ಹೇಳಿದರು.

ತೈತ್ತಿರೀಯ ಉಪನಿಷತ್ತಿನ ‘ಸತ್ಯನ್ನ ಪ್ರಮದಿತವ್ಯಮ್...’ ಎಂಬ ಮಂತ್ರವನ್ನು ಉಲ್ಲೇಖಿಸಿದ ಅವರು, “ಸತ್ಯವನ್ನು ನಿರ್ಲಕ್ಷಿಸಬೇಡಿ. ಧರ್ಮವನ್ನು ನಿರ್ಲಕ್ಷಿಸಬೇಡಿ. ನಿಮ್ಮ ಆತ್ಮವಿಕಾಸವನ್ನು ನಿರ್ಲಕ್ಷಿಸಬೇಡಿ. ಸಮೃದ್ಧಿಯ ಕಾರ್ಯಗಳಿಂದ ವಿಮುಖರಾಗಬೇಡಿ. ಸದಾ ಸ್ವಾಧ್ಯಾಯದಲ್ಲಿ ತೊಡಗಿ, ಕಲಿತ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳಿ” ಎಂಬ ಮೌಲ್ಯಪೂರ್ಣ ಸಂದೇಶವನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಇಂದಿನ ಭಾರತದ ಅಭಿವೃದ್ಧಿ ಪಯಣವನ್ನು ಉಲ್ಲೇಖಿಸಿದ ಅವರು,“ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಶಕ್ತಿಶಾಲಿ ನಾಯಕತ್ವದಲ್ಲಿ ಭಾರತವು ಆತ್ಮವಿಶ್ವಾಸದಿಂದ ‘ವಿಕಸಿತ ಭಾರತ-2047’ ಗುರಿಯತ್ತ ಮುನ್ನಡೆಯುತ್ತಿದೆ.

ಈ ರಾಷ್ಟ್ರೀಯ ಪಯಣದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಮಹತ್ವದ ಪಾತ್ರವಿದೆ. ನಿಮ್ಮ ಗುರುತು ಕೇವಲ ಎನ್‌ಐಟಿ ಕುರುಕ್ಷೇತ್ರಕ್ಕೆ ಸೀಮಿತವಾಗಿಲ್ಲ; ನೀವು ಜಗತ್ತಿನ ಮುಂದೆ ಭಾರತದ ಘನತೆಯನ್ನು ಎತ್ತಿ ಹಿಡಿಯುವ ‘ವಿಕಸಿತ ಭಾರತದ ಸಾರಥಿಗಳು’” ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

**ಬದುಕಿಗೆ ಭಗವದ್ಗೀತೆಯ ದಾರಿ**

ಧರ್ಮಕ್ಷೇತ್ರ ಕುರುಕ್ಷೇತ್ರದ ಐತಿಹಾಸಿಕ ಹಾಗೂ ಆಧ್ಯಾತ್ಮಿಕ ಮಹಿಮೆಯನ್ನು ಸ್ಮರಿಸಿದ ಡಾ. ತೇಜಸ್ವಿನಿ ಅನಂತಕುಮಾರ್ ಅವರು, “ಭಗವದ್ಗೀತೆಯ ಕನಿಷ್ಠ ಐದು ಶ್ಲೋಕಗಳನ್ನು ಅರ್ಥಸಹಿತವಾಗಿ ತಿಳಿದುಕೊಂಡು ಪ್ರತಿದಿನ ಪಠಿಸಬೇಕು. ಅವುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಆಂತರಿಕ ಶಕ್ತಿ ವೃದ್ಧಿಯಾಗುತ್ತದೆ ಮತ್ತು ಬದುಕಿನಲ್ಲಿ ಸಮತೋಲನ ಹಾಗೂ ಸುಸ್ಥಿರತೆ ಸಾಧಿಸಲು ಸಾಧ್ಯವಾಗುತ್ತದೆ” ಎಂದು ಕಿವಿಮಾತು ಹೇಳಿದರು.

ಕುರುಕ್ಷೇತ್ರವು ಕೇವಲ ವಿದ್ಯಾಕ್ಷೇತ್ರವಲ್ಲ; ಕೃಷ್ಣ-ಅರ್ಜುನರ ಸಂವಾದದ ಮೂಲಕ ಜಗತ್ತಿಗೆ ಜ್ಞಾನಪ್ರಕಾಶ ನೀಡಿದ ಪವಿತ್ರ ಭೂಮಿ ಎಂದು ಅವರು ಬಣ್ಣಿಸಿದರು.ಪದವೀಧರರಿಗೆ ಹಾರೈಸುತ್ತಾ ಅವರು,“ನಿಮ್ಮ ಈ ಸಾಧನೆ ಎನ್‌ಐಟಿ ಕುರುಕ್ಷೇತ್ರಕ್ಕೂ ದೇಶಕ್ಕೂ ಹೆಮ್ಮೆಯ ವಿಷಯ. ನಿಮ್ಮ ವಿದ್ಯಾಮಾತೆಯನ್ನು ಸದಾ ಸ್ಮರಿಸಿ. ಕಿರಿಯರಿಗೆ ಮಾರ್ಗದರ್ಶನ ನೀಡಿ. ಹೆಚ್ಚಿನ ಸಂಶೋಧನೆಗಳಲ್ಲಿ ತೊಡಗಿಕೊಳ್ಳಿ. ನಿಮ್ಮ ಚಿಂತನೆಗಳನ್ನು ಸಂಸ್ಥೆಯೊಂದಿಗೆ ಹಂಚಿಕೊಳ್ಳಿ. ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಿ. ನಿಮ್ಮ ಸಾಧನೆಗಳು ಈ ಸಂಸ್ಥೆಯ ಬೆಳವಣಿಗೆಗೂ, ದೇಶದ ಭವಿಷ್ಯಕ್ಕೂ ಮಹತ್ವದ ಕೊಡುಗೆಯಾಗಲಿ” ಎಂದು ಆಶಿಸಿದರು.



ಕುರುಕ್ಷೇತ್ರದ ಮಣ್ಣಿನಲ್ಲಿ ಅಡಗಿರುವ ಕೃಷ್ಣನ ರಥದ ಪೌರಾಣಿಕತೆ ಹಾಗೂ ಐತಿಹಾಸಿಕ ಕುರುಹುಗಳನ್ನು ಸ್ಮರಿಸುತ್ತಾ, ಈ ಪವಿತ್ರ ಭೂಮಿಯ ಶಕ್ತಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಧೈರ್ಯ ಮತ್ತು ಧ್ಯೇಯಬದ್ಧತೆಯನ್ನು ತುಂಬಲಿ ಎಂದು ಅವರು ಹಾರೈಸಿದರು. “ನಿಮ್ಮ ಸಾಧನೆ ಕೇವಲ ವೈಯಕ್ತಿಕವಲ್ಲ; ಅದು ಈ ಸಂಸ್ಥೆಗೂ ಇಡೀ ರಾಷ್ಟ್ರಕ್ಕೂ ಸಲ್ಲುವ ಅಮೂಲ್ಯ ಕೊಡುಗೆ” ಎಂದು ಹೇಳುತ್ತಾ ನವಪದವೀಧರರಿಗೆ ಹಾರ್ದಿಕ ಶುಭಾಶಯಗಳನ್ನು ಕೋರಿದರು.

ಈ ಸಂದರ್ಭದಲ್ಲಿ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಶ್ರೀ ಸಿ.ಪಿ. ರಾಧಾಕೃಷ್ಣನ್, ಹರಿಯಾಣದ ಗೌರವಾನ್ವಿತ ರಾಜ್ಯಪಾಲರಾದ ಪ್ರೊ. ಆಶಿಮ್ ಕುಮಾರ್ ಘೋಷ್ ಮತ್ತು ಹರಿಯಾಣದ ಗೌರವಾನ್ವಿತ ಮುಖ್ಯಮಂತ್ರಿಗಳಾದ ಶ್ರೀ ನಯಾಬ್ ಸಿಂಗ್ ಸೈನಿ ಅವರು ಉಪಸ್ಥಿತರಿದ್ದು, ಪದವಿ ಪಡೆದ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.



# ರಾಜರ್ಷಿ ದುರ್ವಿನೀತ

ಕನ್ನಡ ನಾಡು ಹಲವು ಶತಮಾನಗಳಿಂದ ರಾಜಕೀಯ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಶಕ್ತಿಯ ಕೇಂದ್ರವಾಗಿ ಬೆಳಗಿದೆ. ಇಲ್ಲಿ ಅನೇಕ ದೊರೆಗಳು, ಸಾಮ್ರಾಜ್ಯಗಳು, ಕವಿಗಳು ಹುಟ್ಟಿಕೊಂಡಿದ್ದಾರೆ. ಆದರೆ, ರಾಜಕೀಯ ಶಕ್ತಿ ಹಾಗೂ ಬುದ್ಧಿಶಕ್ತಿ ಎರಡನ್ನೂ ಒಂದೇ ಮನುಷ್ಯನಲ್ಲಿ ಸಮನ್ವಯಗೊಳಿಸಿದ ವಿರಳ ಪ್ರತಿಭೆಗಳು ಇತಿಹಾಸದಲ್ಲಿ ಅಪರೂಪ.



ನಮ್ಮ ನಾಡಿನ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ, ಯುದ್ಧ ಮಾಡಿ ಸಾಮ್ರಾಜ್ಯ ಕಟ್ಟಿದ ರಾಜರು ಅನೇಕರು ಸಿಗುತ್ತಾರೆ. ಆದರೆ, ಒಂದು ಕೈಯಲ್ಲಿ ರಾಜ್ಯ ರಕ್ಷಣೆಯ ಖಡ್ಗವನ್ನೂ, ಮತ್ತೊಂದು ಕೈಯಲ್ಲಿ ಸಾಹಿತ್ಯದ ಲೇಖನಿಯನ್ನೂ ಹಿಡಿದು ಮೆರೆದವರು ತೀರಾ ವಿರಳ. ಅಂತಹ ವಿರಳಾತಿವಿರಳ ರಾಜರ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ ಹೆಸರು—ಪಶ್ಚಿಮ ಗಂಗರ ಚಕ್ರವರ್ತಿ "ದುರ್ವಿನೀತ" (ಸುಮಾರು ಕ್ರಿ.ಶ. 540 – 600).

ಸುಮಾರು ೮೦೦ ವರ್ಷಗಳ ಕಾಲ ಕನ್ನಡ ನಾಡಿನ ಭಾಗವನ್ನು ಆಳಿದ ಗಂಗರ ವಂಶದಲ್ಲಿ ೧೪ಕ್ಕೂ ಹೆಚ್ಚು ರಾಜರು ಬಂದು ಹೋದರು. ಆದರೆ ದುರ್ವಿನೀತನದ್ದು ಮಾತ್ರ ಪ್ರತ್ಯೇಕ ನಿಲುವು. ಆತ ಕೇವಲ ರಾಜನಲ್ಲ, ಸಿಂಹಾಸನ ಏರಿದ ಒಬ್ಬ ಋಷಿ; ಅಕ್ಷರಶಃ ಒಬ್ಬ 'ರಾಜರ್ಷಿ'.

ದುರ್ವಿನೀತನಿಗೆ ಸಿಂಹಾಸನ ಬಂಗಾರದ ತಟ್ಟೆಯಲ್ಲಿ ಸಿಗಲಿಲ್ಲ ಎನ್ನುವುದೇ ರೋಚಕ ಸಂಗತಿ. ಇವನು ಗಂಗ ದೊರೆ ಅವಿನೀತನ ಮಗ. ದಂತಕಥೆಗಳ ಪ್ರಕಾರ, ಅವಿನೀತನು ತನ್ನ ಪಟ್ಟದ ರಾಣಿಯ ಮಗನಾದ ದುರ್ವಿನೀತನನ್ನು ಬಿಟ್ಟು, ಬೇರೊಬ್ಬ ರಾಣಿಯ ಮಗನಾದ ವಿಷ್ಣುಗೋಪನಿಗೆ ಪಟ್ಟ ಕಟ್ಟಲು ಇಚ್ಛಿಸಿದ್ದ. ಆದರೆ, ದುರ್ವಿನೀತನು ತನ್ನ ಸ್ವಂತ ಸಾಮರ್ಥ್ಯ, ರಾಜಕೀಯ ಚಾತುರ್ಯ ಹಾಗೂ ಭುಜಬಲದಿಂದ ಸಿಂಹಾಸನಕ್ಕಾಗಿ ಹೋರಾಡಿದ. ತನ್ನ ಚಿಕ್ಕಪ್ಪನಾದ ಶ್ರೀವಿಕ್ರಮನ ಸಹಾಯದಿಂದ ವಿಷ್ಣುಗೋಪ ಮತ್ತು ಅವನ ಮಿತ್ರರಾದ ಕದಂಬರು ಮತ್ತು ಆಳುಪರನ್ನು ಸೋಲಿಸಿ, ಗಂಗ ಸಿಂಹಾಸನವನ್ನು ಏರಿದ. ಈ ರಾಜಕೀಯ ಜಯದಿಂದಾಗಿ ಗಂಗ ಸಾಮ್ರಾಜ್ಯದ ಗಡಿಗಳು ವಿಸ್ತಾರಗೊಂಡವು. ಕಾವೇರಿ ಮತ್ತು ಕಬಿನಿ ನದಿಗಳ ನಡುವಿನ ಸಮೃದ್ಧವಾದ 'ಪುನ್ನಾಟ' ಪ್ರದೇಶವನ್ನು ಆತ ವಶಪಡಿಸಿಕೊಂಡ. ಕದಂಬರಿಂದ ಹಿಡಿದು ಹೊಯ್ಸಳರವರೆಗೂ 'ಚಿನ್ನದ ನಾಡು' ಎಂದೇ ಕರೆಸಿಕೊಂಡಿದ್ದ ಆ ಪುನ್ನಾಟದ ಪ್ರಭುವಾಗಿ ಮೆರೆದನು.

ಯುದ್ಧಭೂಮಿಯಲ್ಲಿ ಈತನ ಪರಾಕ್ರಮ ಎಷ್ಟಿತ್ತೋ, ಸಾಹಿತ್ಯ ಸಭೆಯಲ್ಲಿ ಈತನ ಪಾಂಡಿತ್ಯವೂ ಅದಕ್ಕಿಂತ ಮಿಗಿಲಾಗಿತ್ತು. ೬ನೇ ಶತಮಾನದ ಆ ಕಾಲಘಟ್ಟದಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತವಿದ್ದ ಪೈಶಾಚಿ ಮತ್ತು ಪ್ರಾಕೃತ ಭಾಷೆಗಳ ಜೊತೆಗೆ, ಸಂಸ್ಕೃತ ಹಾಗೂ ಕನ್ನಡದಲ್ಲೂ ಈತ ದಿಗ್ಗಜನಾಗಿದ್ದನು. ಇದಕ್ಕೊಂದು ಜ್ವಲಂತ ಉದಾಹರಣೆಯೆಂದರೆ, ಸಂಸ್ಕೃತ ಮಹಾಕವಿ ಭಾರವಿಯ 'ಕಿರಾತಾರ್ಜುನೀಯ' ಮಹಾಕಾವ್ಯದ ಮೇಲಿನ ಈತನ ಪ್ರಭುತ್ವ. ಅತ್ಯಂತ ಕ್ಲಿಷ್ಟಕರವೆಂದು ಪರಿಗಣಿಸಲಾದ ಆ ಕಾವ್ಯದ ೧೫ನೇ ಸರ್ಗಕ್ಕೆ (ಅಧ್ಯಾಯ) ಟೀಕೆಯನ್ನು ಬರೆಯುವ ಮೂಲಕ, ಅಂದಿನ ವಿದ್ವಾಂಸರ ಹುಬ್ಬೇರಿಸುವಂತೆ ಮಾಡಿದ್ದನು. ಉತ್ತನೂರು ಮತ್ತು ಅಗರದ ಶಾಸನಗಳು ಇಂದಿಗೂ ಈ ಸಾಹಿತ್ಯಕ ಸಾಹಸವನ್ನು ಸಾರಿ ಹೇಳುತ್ತಿವೆ. ಅಷ್ಟೇ ಅಲ್ಲ, ಗುಣಾಢ್ಯನ 'ವಡ್ಡಕಥಾ' ಕೃತಿಯನ್ನು ಸಂಸ್ಕೃತಕ್ಕೆ ಅನುವಾದಿಸಿದ್ದು ಹಾಗೂ 'ಶಬ್ದಾವತಾರ' ಎಂಬ ವ್ಯಾಕರಣ ಕೃತಿಯನ್ನು ರಚಿಸಿದ್ದು ಈತನ ಅಪ್ರತಿಮ ವಿದ್ವತ್ತಿಗೆ ಸಾಕ್ಷಿಯಾಗಿದೆ.

ಸ್ವತಃ ಕವಿ ಮತ್ತು ವಿದ್ವಾಂಸನಾಗಿದ್ದ ಕಾರಣ, ದುರ್ವಿನೀತನು ತನ್ನ ಆಸ್ಥಾನದಲ್ಲಿ ಅನೇಕ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಆಶ್ರಯದಾತನಾಗಿದ್ದನು. ಹೀಗಾಗಿ ಕನ್ನಡ ಸಾರಸ್ವತ ಲೋಕಕ್ಕೆ ಈತ ನೀಡಿದ ಕೊಡುಗೆ ಅಪಾರ. ಶಾಸನಗಳು ಇವನನ್ನು 'ವಿದ್ವಾನ್ ಕವಿ' ಮತ್ತು 'ಪುನ್ನಾಟದ ಪ್ರಭು' ಎಂದು ಬಣ್ಣಿಸಿವೆ. ದುರ್ವಿನೀತನು ಜೈನ ಧರ್ಮದ ಅನುಯಾಯಿಯಾಗಿದ್ದರೂ, ಶೈವ, ವೈಷ್ಣವ ಮತ್ತು ಬೌದ್ಧ ಧರ್ಮಗಳನ್ನು ಗೌರವಿಸುವ ಸಹಿಷ್ಣು ಮನೋಭಾವ ಹೊಂದಿದ್ದ. ತನ್ನ ರಾಜ್ಯಾದ್ಯಂತ ಬಸದಿಗಳನ್ನು ನಿರ್ಮಿಸಿದ್ದು ಅವನ ಧಾರ್ಮಿಕ ನಿಷ್ಠೆಗೆ ಸಾಕ್ಷಿ. ಗುಮ್ಮರೆಡ್ಡಿ ತಾಮ್ರಪಟದ ಮಾಹಿತಿಯ ಪ್ರಕಾರ, ತನ್ನ ಆಳ್ವಿಕೆಯ ೪೦ನೇ ವರ್ಷದಲ್ಲಿ, ತನ್ನ ಹುಟ್ಟುಹಬ್ಬದ ಸಂದರ್ಭದಲ್ಲಿ ದಾನ-ಧರ್ಮಗಳನ್ನು ಮಾಡಿ ಪ್ರಜೆಗಳ ಕಲ್ಯಾಣವನ್ನು ಕಾಪಾಡಿದ್ದ.

ಇಂದಿನ ಕಾಲದಲ್ಲಿ, ರಾಜಕೀಯ ಹಾಗೂ ಸಾಂಸ್ಕೃತಿಕ ನಾಯಕತ್ವಗಳು ಬೇರೆ ಬೇರೆಯಾಗಿ ಕಾಣುತ್ತಿರುವಾಗ, ದುರ್ವಿನೀತನ ಜೀವನ ಮತ್ತು ಸಾಧನೆಗಳು ನಮಗೆ ಒಂದು ಮಹತ್ವದ ಪಾಠ ಹೇಳುತ್ತವೆ. ನಿಜವಾದ ನಾಯಕತ್ವವೆಂದರೆ ಬಲದ ಜೊತೆಗೆ ಬುದ್ಧಿಯೂ, ಆಡಳಿತದ ಜೊತೆಗೆ ಸೃಜನಶೀಲತೆಯೂ ಇರಬೇಕು. ಅವನು ಕನ್ನಡದ ಹಿರಿಮೆಯನ್ನು ಎತ್ತಿ ತೋರಿಸಿದ ರಾಜರ್ಷಿ. ದುರ್ವಿನೀತನಂತಹ ಮಹಾನ್ ವ್ಯಕ್ತಿಗಳ ಕಥೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮ ಕರ್ತವ್ಯ. ಇಂತಹ ವ್ಯಕ್ತಿತ್ವಗಳು ನಮ್ಮ ನಾಡು, ನುಡಿ ಮತ್ತು ಸಂಸ್ಕೃತಿಯ ಅಮೂಲ್ಯ ಸಂಪತ್ತುಗಳಾಗಿವೆ.

## ಅದಮ್ಯ ಚೇತನ ಸಂಸ್ಥೆಯಿಂದ ವಿವಿಧೆಡೆ ನಡೆಯುತ್ತಿರುವ ನಿತ್ಯ ಅನ್ನದಾನದ ಚಿತ್ರಗಳು











## ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ "ಕಮಲಸಖಿ ಸಭೆ" ಕಾರ್ಯಕ್ರಮ



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ದಿನಾಂಕ 16 ಡಿಸೆಂಬರ್ 2025 ರಂದು "ಕಮಲಸಖಿ ಸಭೆ" ಎಂಬ ವಿಶೇಷ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರ ಉಪಸ್ಥಿತಿಯಲ್ಲಿ ನಡೆದ ಈ ಸಭೆಯು ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಚಿಂತನೆಗಳಿಗೆ ಪ್ರಶಸ್ತ ವೇದಿಕೆಯಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಮಲ್ಲಿಕಾ ನಡ್ಡಾ (ಅಧ್ಯಕ್ಷರು, ಸ್ಪೆಷಲ್ ಒಲಿಂಪಿಕ್ಸ್ ಭಾರತ್). ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಹಿಳೆಯರು ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೇಗೆ ಮುಂಚೂಣಿಗೆ ಬರಬಹುದು ಎಂಬ ಬಗ್ಗೆ ಪ್ರೇರಣಾದಾಯಕ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಸಾಮಾಜಿಕ ಹೊಣೆಗಾರಿಕೆ ಮತ್ತು ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ನಿರ್ಣಾಯಕ ಪಾತ್ರದ ಕುರಿತು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಎಬಿವಿಪಿಯ (ABVP) ಪೂರ್ಣಾವಧಿ ಕಾರ್ಯಕರ್ತರಾದ ಶ್ರೀ ಸದಾಶಿವ ದೇವಧರ್ ಜಿ ಅವರು ಮಾತನಾಡಿ, 'ಮಹಿಳೆಯರು ಸಮಾಜವನ್ನು ಸುಧಾರಿಸಬೇಕೆಂದರೆ ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಲೆಗೆ ಬರಬೇಕು' ಎಂದು ತಿಳಿಸಿದರು. ಅಲ್ಲದೆ, ದೇಶದ ಬೌದ್ಧಿಕ ಸಾಮರ್ಥ್ಯ, ಚಿಂತನೆ ಮತ್ತು ಧರ್ಮದ ಬಗ್ಗೆ ತಿಳಿಯಲು ಭಗಿನಿ ನಿವೇದಿತಾ ಅವರ ಪುಸ್ತಕಗಳನ್ನು ಓದಬೇಕು ಎಂದು ಅವರು ಕರೆ ನೀಡಿದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀಮತಿ ಜ್ಯೋತಿ ಪಾಟೀಲ, ರಾಷ್ಟ್ರೀಯ ಸೇವಾ ಭಾರತಿಯ ಅಖಿಲ ಭಾರತ ಕಾರ್ಯದರ್ಶಿಯಾದ ಚಂದ್ರಿಕಾ ಚಹ್ವಾಣ್, ಎಬಿವಿಪಿಯ ಹಿರಿಯ ಕಾರ್ಯಕರ್ತರು ಹಾಗೂ ಪತ್ರಕರ್ತರಾದ ಶ್ರೀ ಅರುಣ್ ಕರ್ಮಾಕರ್ ಮತ್ತು ಮಹಿಳಾ ಕಾರ್ಪೊರೇಟರ್‌ಗಳು ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಸ್ವಾತಿ ಪಟ್ಟೇದ ಕಾರ್ಯಕ್ರಮವನ್ನು ನಿರೂಪಿಸಿದರು.

**ಹಸಿರು ಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 517 ರಿಂದ 521ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 517, 518 519,520 ಮತ್ತು 521 ಹಸಿರು ಭಾನುವಾರಗಳನ್ನು ಕ್ರಮವಾಗಿ, ಬೆಂಗಳೂರಿನ ಬನ್ಯಾನ್ ಪಾರ್ಕ್ ಸರ್ ಎಂ ವಿಶ್ವೇಶ್ವರಯು ಲೇಔಟ್ ಆವರಣ ಅದಮ್ಯ ಚೇತನ ಸಂಸ್ಥೆಯ ಆವರಣ, ಬಿ.ಪಿ ವಾಡಿಯಾ ರಸ್ತೆಯ ಅನಂತವನದ ಆವರಣ, ಜೀವನ್ ಭೀಮಾನಗರದ ರಾಷ್ಟ್ರೀಯ ಅಂಧರ ಸಂಘ ಸಂಸ್ಥೆಯ ಆವರಣ, ಶಿವನಪುರದ ನೆಮ್ಮದಿ ಉಪಶಾಂಕ ಆರೈಕೆ ಕೇಂದ್ರದ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು, ಹಸಿರು ಯೋಧರು ಸಾರ್ವಜನಿಕರು ಭಾಗವಹಿಸಿದ್ದರು.

## ೩೦ಗಳ ವರದಿ
### ( ನವೆಂಬರ್ - ಡಿಸೆಂಬರ್ )

### ನಿತ್ಯ ಅನ್ನದಾನ

ಅದಮ್ಯ ಚೇತನ ಸಂಸ್ಥೆಯು ಸಾಮಾಜಿಕ ಕಳಕಳಿಯೊಂದಿಗೆ ಬೆಂಗಳೂರು, ಅಯೋಧ್ಯೆ, ಕಲಬುರಗಿ ಮತ್ತು ಹುಬ್ಬಳ್ಳಿ ನಗರಗಳಲ್ಲಿ 'ನಿತ್ಯ ಅನ್ನದಾನ' ಎಂಬ ಮಹತ್ತರ ಯೋಜನೆಯನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಸಮಾಜದ ಹಸಿದವರಿಗೆ ಮತ್ತು ಅಗತ್ಯವಿರುವ ಜನರಿಗೆ ಪ್ರತಿದಿನ ರುಚಿಕರವಾದ ಹಾಗೂ ಪೌಷ್ಟಿಕಾಂಶಯುಕ್ತ ಭೋಜನವನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ.

ವಿಶೇಷವಾಗಿ ಬೆಂಗಳೂರು ನಗರದ ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ, ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಹಲಸೂರು ಮತ್ತು ಲಾಲ್‌ಬಾಗ್‌ನ ಅನಂತ ಸ್ಮೃತಿ ವನ ಸೇರಿದಂತೆ ಹಲವು ಪ್ರಮುಖ ಕೇಂದ್ರಗಳಲ್ಲಿ ಈ ಸೇವಾ ಕಾರ್ಯವು ನಿರಂತರವಾಗಿ ನಡೆಯುತ್ತಿದ್ದು, ಪ್ರತಿನಿತ್ಯ ಸಾವಿರಾರು ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಸಮಾಜದ ಈ ಉದಾತ್ತ ಕಾರ್ಯದಲ್ಲಿ ಸಾರ್ವಜನಿಕರು ಸಹ ದೇಣಿಗೆ ನೀಡುವ ಮೂಲಕ ಅಥವಾ ಸ್ವಯಂಸೇವಕರಾಗಿ ಪಾಲ್ಗೊಳ್ಳಲು ಮುಕ್ತ ಅವಕಾಶವಿದೆ. ಈ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ಅಥವಾ ನಿಮ್ಮ ಸಹಕಾರ ನೀಡಲು ಸಂಸ್ಥೆಯ ಅಧಿಕೃತ ವೆಬ್‌ಸೈಟ್ www.adamyachetana.org ಗೆ ಭೇಟಿ ನೀಡಬಹುದು.

## ಸಂಸ್ಕೃತಿ ರಕ್ಷಣೆಗೆ ಅನಂತ ಪ್ರೇರಣಾ ಕೇಂದ್ರದ ಹೆಜ್ಜೆ.



ಅನಂತ ಪ್ರೇರಣಾ ಕೇಂದ್ರ ಹಾಗೂ ಸಂಸ್ಕೃತ ಭಾರತೀ ಹುಬ್ಬಳ್ಳಿ ಅವರ ಸಂಯುಕ್ತ ಆಶ್ರಯದಲ್ಲಿ ವಿಜಯನಗರದ ಶ್ರೀ ಕೃಷ್ಣದೇವರಾಯ ಬಾಲ ಕೇಂದ್ರಗಳ ಅಭ್ಯಾಸ ವರ್ಗ ಪ್ರತಿ ಶನಿವಾರ ಸಾಯಂಕಾಲ 4 ರಿಂದ 6 ಗಂಟೆಯವರೆಗೆ ಅನಂತ ಪ್ರೇರಣಾ ಕೇಂದ್ರ, ಹುಬ್ಬಳ್ಳಿಯಲ್ಲಿ ನಡೆಯುತ್ತಿದೆ.

ಪ್ರತೀ ವಾರ ಸುಮಾರು 40 ರಿಂದ 50 ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕೃತಿ, ಸಂಸ್ಕೃತ ಭಾಷಾ ಅಭ್ಯಾಸ, ಒಳ್ಳೆಯ ಸಂಸ್ಕಾರಗಳು ಮತ್ತು ದೇಶೀಯ ಕ್ರೀಡೆಗಳ ತರಬೇತಿಯನ್ನು ನೀಡಲಾಗುತ್ತದೆ. ಅದೇ ರೀತಿ, ಪ್ರತಿ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮಾತೃ ಮಿಲನ ಎಂಬ ವಿಶೇಷ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುತ್ತಿದ್ದು, ಇದರಲ್ಲಿ 15 ರಿಂದ 20 ಮಾತೆಯರು ಸಕ್ರಿಯವಾಗಿ ಭಾಗವಹಿಸುತ್ತಾರೆ.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ. ಶ್ರೀಚೇತನ ಸಭೆ, 32 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರ ಗಳಿಂದ ಉಚಿತ ಭೋಜನ ವಿತರಣೆ ಆದಿಯಾಗಿ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.


ಅನಂತಪಥ

Published by: Tejaswini Ananthkumar
Inputs : Nagesh Hegade | T S Gopal | Poornaprajna| Trivikram Joshi
ACknowledgements:
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು; ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಚಿಣ್ಣರ ಚೇತನ


## ಜನವರಿ ತಿಂಗಳಲ್ಲಿ ಜನಿಸಿದ ಅಪ್ರತಿಮ ಸಾಧಕರು



ಜನವರಿ 4ರಂದು (1648) ಜನಿಸಿದ ಸರ್ ಐಸ್ಯಾಕ್ ನ್ಯೂಟನ್ ಹೆಸರನ್ನು ನಾವು ಕೇಳಿದ್ದೇವೆ. ಮನುಷ್ಯರ ಚರಿತ್ರೆಯಲ್ಲೇ ಅತ್ಯಂತ ಮೇಧಾವಿ ವಿಜ್ಞಾನಿ ಎಂಬ ಖ್ಯಾತಿ ಅವರದ್ದು. ಮೇಲಕ್ಕೆ ಎಸೆದ ಚಂಡು ಕೆಳಕ್ಕೆ ಏಕೆ ಬೀಳುತ್ತದೆ ಎಂಬ ಪ್ರಶ್ನೆಯನ್ನು ತನಗೆ ತಾನೇ ಹಾಕಿಕೊಂಡು, ಗುರುತ್ವಾಕರ್ಷಣ ಸಿದ್ಧಾಂತವನ್ನೂ ಚಲನೆಯ ನಿಯಮಗಳನ್ನೂ ರೂಪಿಸಿದ ವಿಜ್ಞಾನಿ.



ಜನವರಿ 8ರಂದು (1942) ಜನಿಸಿದ ಸ್ಟೀಫನ್ ಹಾಕಿಂಗ್ ಎಂದರೆ ನಕ್ಷತ್ರಗಳ ಮಧ್ಯೆ ಅಲ್ಲಲ್ಲಿ ಕಪ್ಪುರಂಧ್ರ ಇರುತ್ತವೆಂದು ಗಣಿತ ಸೂತ್ರದ ಆಧಾರದಿಂದಲೇ ಪತ್ತೆ ಹಚ್ಚಿದವರು. ಇವರ ವಿಶೇಷ ಏನೆಂದರೆ ಯುವಕನಾಗಿದ್ದಾಗಲೇ ವಿಚಿತ್ರ ಕಾಯಿಲೆಗೆ ತುತ್ತಾಗಿ ಅಂಗಾಂಗ ಚಲನೆಯನ್ನೂ ಮಾತನ್ನೂ ಕಳೆದುಕೊಂಡು ಸದಾ ಗಾಲಿಕುರ್ಚಿಯ ಮೇಲೆಯೇ ಇದ್ದವರು. ಕೇವಲ ಕಣ್ಣು ಮತ್ತು ಬೆರಳ ತುದಿಯ ಚಲನೆಯ ಮೂಲಕವೇ ವಿಜ್ಞಾನ ಲೋಕದಲ್ಲಿ ಬೆರಗು ಮೂಡಿಸಿದವರು.






ಜನವರಿ 9 ಇಬ್ಬರು ಖ್ಯಾತ ವ್ಯಕ್ತಿಗಳ ಜನ್ಮದಿನ. 1922ರಂದು ಜನಿಸಿದ ಹರಗೋಬಿಂದ್ ಖೊರಾನಾ ಹೆಚ್ಚಿನ ಓದಿಗೆಂದು ಅಮೆರಿಕಕ್ಕೆ ಹೋಗಿ ಅಲ್ಲಿಯ ನಾಗರಿಕರಾಗಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ. ಪ್ರೋಟೀನುಗಳ ಮೇಲೆ ಅವರು ಸಂಶೋಧನೆ ನಡೆಸಿದವರು. ಇನ್ನೊಬ್ಬ ಭಾರತೀಯನ ಹೆಸರು ಸುಂದರಲಾಲ್ ಬಹುಗುಣ. 1927ರಲ್ಲಿ ಹಿಮಾಲಯದ ತಡಿಯಲ್ಲಿ ಜನಿಸಿದ ಇವರು ವಿಜ್ಞಾನಿಯಲ್ಲ ಆದರೆ ಪರಿಸರವಾದಿ. ಇವರನ್ನು “ಚಿಪ್ಕೊ ಚಳವಳಿಯ ಜನಕ” ಎಂದೇ ಕರೆಯಲಾಗುತ್ತದೆ. ಗಿಡಮರಗಳನ್ನು ಕಡಿಯಬೇಡಿ ಎಂದು ಒತ್ತಾಯಿಸಲು ಇವರು ಮರಗಳನ್ನೇ ಅಪ್ಪಿ ಹಿಡಿದು ಹೊಸ ಬಗೆಯ ಚಳವಳಿ ಮಾಡಲು ಉತ್ತರಾಖಂಡದ ಹಳ್ಳಿಯ ಜನರಿಗೆ ಪ್ರೇರಣೆ ನೀಡಿದವರು.

**ಜನವರಿ 12 (1863) ಸ್ವಾಮಿ ವಿವೇಕಾನಂದರ ಜನ್ಮದಿನ. ಹಿಂದೂ ಧರ್ಮದ ಖ್ಯಾತಿಯನ್ನು ಜಗತ್ತಿಗೆ ಪರಿಚಯಿಸಿದ ಸನ್ಯಾಸಿ. ಅವರ ಮೂಲ ಹೆಸರು ಏನೆಂದು ಪತ್ತೆ ಮಾಡಬಲ್ಲಿರಾ?**



## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ, ಸೋಂದಾದ ಶ್ರೀ ಗಂಗಾಧರೇಶ್ವರ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆದ ಪಶ್ಚಿಮಘಟ್ಟದ ನದಿತಿರುಳು ಯೋಜನೆಗಳ ಕುರಿತ ಜನಜಾಗೃತಿ-ಚಿಂತನ ಮಂಥನ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗವಹಿಸಿದ್ದರು.



ಎಬಿವಿಪಿ ಹಿರಿಯ ನಾಯಕರಾದ ಶ್ರೀ ಸದಾಶಿವ ದೇವಧರ್ ಮತ್ತು ಶ್ರೀಮತಿ ಮಲ್ಲಿಕಾ ನಡ್ಡಾ ಅವರು ಹುಬ್ಬಳ್ಳಿಯ ಅದಮ್ಯ ಚೇತನ ಅಡುಗೆ ಮನೆಗೆ ಭೇಟಿ ನೀಡಿ, ಅಲ್ಲಿನ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಡಾ. ಮಲ್ಲಿಕಾ ನಡ್ಡಾ ಅವರು ಭೇಟಿ ನೀಡಿ, ಶ್ರೀ ಅನಂತಕುಮಾರ್ ಅವರ ಕುರಿತ ಚಿತ್ರಪ್ರದರ್ಶನಿ ಹಾಗೂ ಕಿರುಚಿತ್ರಗಳನ್ನು ವೀಕ್ಷಿಸಿದರು.




ಬೆಂಗಳೂರಿನ ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆ ಮನೆಗೆ ಸಿಂಗಾಪುರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು 2025ರ ಡಿಸೆಂಬರ್ 11ರಂದು ಭೇಟಿ ನೀಡಿದರು.



ಸಂವರ್ಧಿನಿ ವರ್ಕ್‌ಶಾಪ್‌ನ 32 ಜನರ ತಂಡ ಮತ್ತು 15 ಎನ್‌ಜಿಒಗಳ ಪ್ರತಿನಿಧಿಗಳು ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯ ಅಡುಗೆ ಮನೆಗೆ ಭೇಟಿ ನೀಡಿದರು.



ದಿನಾಂಕ 06-12-2025 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಲಯನ್ಸ್ ಇಂಗ್ಲಿಷ್ ಮೀಡಿಯಂ ಶಾಲೆಯ 60 ಮಕ್ಕಳು ಭೇಟಿ ನೀಡಿದರು.



ಪರಿಸರ ಸಂರಕ್ಷಣೆಯನ್ನೇ ಜೀವಾಳವಾಗಿಸಿಕೊಂಡು ಶ್ರಮಿಸುತ್ತಿರುವ ಅದಮ್ಯ ಚೇತನ ಸಂಸ್ಥೆಯು 'ಹಸಿರು ಭಾನುವಾರ'ದ 520ನೇ ಕಾರ್ಯಕ್ರಮವನ್ನು ಜೀವನ್ ಭೀಮಾನಗರದ ರಾಷ್ಟ್ರೀಯ ಅಂಧರ ಸಂಘದ ಆವರಣದಲ್ಲಿ ಡಿಸೆಂಬರ್ 14 ರಂದು ಯಶಸ್ವಿಯಾಗಿ ನಡೆಯಿತು.



ರಾಮನಗರಿ ಅಯೋಧ್ಯೆಯಲ್ಲಿ ಅದಮ್ಯ ಚೇತನ ಸಂಸ್ಥೆಯಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.